www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 12 ಡಿಸೆಂಬರ್ 2013
Volume : IX Issue : XII December 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಸಾಕ್ಷಿಯ ಸ್ವರ
3. ಯೌವನಸ್ವರ
4. ಸ್ಥಳೀಯ ಮತ್ತು ವಿದೇಶ ಸುದ್ಧಿ
5. ವಯಸ್ಕರ ಸ್ವರ
6. ಕಿಸ್ತನ ಪ್ರಕಾಶವನ್ನು ಹೊಂದಿಕೋ
7. ಪ್ರಾರ್ಥನಾ ಮನವಿಗಳು
8. ಅನಾಥರ ಸ್ವರ
9. ನೀತಿವಂತನ ಆಶೀರ್ವಾದಗಳು
10. ಪ್ರಾರ್ಥನಾ ಸ್ವರ
11. ಮಹಿಳೆಯರ ಸ್ವರ
12. ಆರೋಗ್ಯ ಸ್ವರ
13. ಜಾಹೀರಾತು
14. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧವಾದ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ನಾವು ಮೊನ್ನೆ ತಾನೇ ಹೊಸ ವರ್ಷ ಆರಂಭಿಸಿದ ಹಾಗೆ ಇದೆ. ನಿಮಿಷಗಳು, ಗಂಟೆಗಳು, ದಿವಸಗಳು, ವಾರಗಳು, ತಿಂಗಳು ಓಡಿ ಹೋಗುವಂತದ್ದು ನಮಗೆ ಗೋತ್ತಾಗುವುದಿಲ್ಲ. ಅದಕ್ಕೆ ಭಕ್ತನಾದ ಮೋಶೆಯು "ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು; ಆಗ ಜ್ಞಾನದ ಹೃದಯವನ್ನು ಪಡಕೊಳ್ಳುವೆವು" (ಕೀರ್ತ. 90:12)ರಲ್ಲಿ ಹೇಳಿದ್ದಾನೆ. ಈ ಲೋಕದಲ್ಲಿ ಜೀವಿಸುವ ದಿವಸಗಳು ಕೊಂಚವೇ ಆಗಿರಬಹುದು ಆದರೆ ಇದು ನಮ್ಮನ್ನು ನಿತ್ಯತ್ವಕ್ಕೆ ಸಿದ್ಧಪಡಿಸುವ ಕಾಲವಾಗಿದೆ ಮತ್ತು ಇತರರನ್ನು ಸಿದ್ಧಪಡಿಸುವ ಕಾಲವಾಗಿದೆ. "ಈ ದಿನಗಳು ಕೆಟ್ಟವುಗಳಾಗಿವೆ; ಆದದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ" (ಎಫೆ. 5:16). "ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ" (ಕೊಲೊ. 4:5). ಕರ್ತನಾದ ಯೇಸುಕ್ರಿಸ್ತನು ಹೇಳಿದ್ದಾನೆ, ಯೋಹಾ. 9:4–5ರಲ್ಲಿ ಈ ರೀತಿ ಹೇಳಿದ್ದಾನೆ, "ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡಿಸಬೇಕು. ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು. ನಾನು ಲೋಕದಲ್ಲಿರುವಾಗ ಲೋಕಕ್ಕೆ ಬೆಳಕಾಗಿದ್ದೇನೆ ಅಂದನು". ಸತ್ತನಂತರ ಕರ್ತನ ರಾಜ್ಯಕ್ಕಾಗಿ, ಕರ್ತನ ಸುವಾರ್ತೆ ಸೇವೆಗಾಗಿ, ಕರ್ತನ ಸಭೆಗಾಗಿ ಏನೂ ಮಾಡಲು ಸಾಧ್ಯವಿಲ್ಲ. ಆರೋಗ್ಯ ಕಳಕೊಂಡ ನಂತರ ದೇವರಿಗಾಗಿ ಮತ್ತು ದೇವರ ರಾಜ್ಯಕ್ಕಾಗಿ ಏನೂ ಮಾಡಲು ಸಾಧ್ಯವಿಲ್ಲ ಆದಕಾರಣ ಈಗ ಆರೋಗ್ಯ ಇದೆ, ಜೀವ ಇದೆ, ಸುವಾರ್ತೆಗಾಗಿ ಬಾಗಿಲು ತೆರೆಯಲ್ಪಟ್ಟಿದೆ ನಾವು ಆಲಸ್ಯ ಬಿಟ್ಟು ದೇವರಿಗಾಗಿ ಓಡೋಣ. "ಪರ್ವತಗಳ ಮೇಲೆ ತ್ವರೆಪಡುತ್ತಾ ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ; ಒಳ್ಳೆಯ ಶುಭವರ್ತಮಾನವನ್ನು, ಶುಭದ ಸುರ್ವಾತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ ಎಂದು ಚೀಯೋನಿಗೆ ತಿಳಿಸುವವನಾಗಿದ್ದಾನೆ" (ಯೆಶಾ. 52:7). "ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯತೀರಿಸುವದಕ್ಕೆ ಬರುವ ಕ್ರಿಸ್ತ ಯೇಸುವಿನ ಮುಂದೆ ಆತನ ಪ್ರತ್ಯಕ್ಷತೆಯ ಮೇಲೆಯೂ ಆತನ ರಾಜ್ಯದ ಮೇಲೆಯೂ ಆಣೆಯಿಟ್ಟು ನಾನು ನಿನಗೆ ಖಂಡಿತವಾಗಿ ಹೇಳುವದೇನಂದರೆ ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು" (2 ತಿಮೊ. 4:1–2). ದೇವರ ಸ್ವರ ಸೇವೆಯ ಮೂಲಕ ಅನೇಕ ಆತ್ಮಗಳು ಕ್ರಿಸ್ತನನ್ನು ತಿಳಿದುಕೊಳ್ಳುತ್ತಿರುವುದಕ್ಕಾಗಿ ಮತ್ತು ಅನೇಕ ಸಮಸ್ಯೆಗಳಿಂದ ಬಿಡುಗಡೆ ಹೊಂದುತ್ತಿರುವುದಕ್ಕಾಗಿ ಕರ್ತನಿಗೆ ಸ್ತೋತ್ರ ಹೇಳುತ್ತೇವೆ. ದೇವರ ಸ್ವರ ಮಾಸ ಪತ್ರಿಕೆಯು ದೇವರ ವಾಕ್ಯವನ್ನು ಹೊತ್ತು ಹೋಗುವ ಒಬ್ಬ ಸುವಾರ್ತ ಸೇವಕನಿಗೆ ಸಮಾನವಾಗಿದೆ. ವಿವಿಧ ಸಮಸ್ಯೆಗಳಿಂದಾಗಿ ಸುವಾರ್ತ ಸೇವೆಯನ್ನು ಮಾಡಲು ಸಾಧ್ಯವಾಗದೇ ಇರುವುದಾದರೆ ನೀವು ನಮ್ಮ ಮಾಸ ಪತ್ರಿಕೆಯನ್ನು ಎತ್ತಿ ಹಿಡಯಬಹುದು, ಪ್ರಾರ್ಥಿಸಬಹುದು, ಇದು ಇನ್ನು ಹೆಚ್ಚು ಮುದ್ರಣವಾಗಲು ಆರ್ಥಿಕ ಸಹಾಯಮಾಡಬಹುದು. ನಿಮ್ಮ ಸ್ನೇಹಿತರಿಗೆ, ಪರಿಚಯಸ್ಥರಿಗೆ ಆರ್ಥಿಕ ತೊಂದರೆ ಇದ್ದರೆ ವಾರ್ಷಿಕ ಚಂದಾವನ್ನು ಭರಿಸಿ ಅವರು ದೇವರ ಸ್ವರ ಮಾಸ ಪತ್ರಿಯನ್ನು ಓದಿ ಆಶೀರ್ವಾದ ಹೊಂದಲು ಸಹಾಯಮಾಡಬಹುದು. ಹೊಸ ವರ್ಷವನ್ನು ಎದುರುಗೊಳ್ಳುವ ನಿಮ್ಮನ್ನು ದೇವರು ಆಶೀರ್ವದಿಸಲಿ.

ಕರ್ತನು ನಿಮ್ಮನ್ನು ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕ

# ಪ್ರಕಟಣೆ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**ಆಂತರಿಕ ಹಿಂಸೆಗಳು:**

1) ಯೆಹೂದ್ಯರಿಂದ (2:9) ಇಲ್ಲಿ ಹೇಳಿರುವ ಯೆಹೂದ್ಯರು ಹೊರಗಿನವರಲ್ಲ ಒಳಗಿನವರಾಗಿದ್ದಾರೆ. ಸಭೆಗೆ ಸಮಸ್ಯೆ ಹೊರಗಿನಿಂದ ಬಂದರೆ ಅದನ್ನು ಎದುರಿಸಬಹುದು. ಒಳಗಿನಿಂದ ಬಂದರೆ ಕಷ್ಟ. ಇಸ್ರಾಯೇಲರ ಪ್ರಯಾಣದಲ್ಲಿ ಅವರಿಗೆ ತೊಂದರೆ ಮಾಡಿದ್ದು ಅವರೊಳಗಿದ್ದ ಸಮ್ಮಿಶ್ರ ಜನಾಂಗ. ಇವತ್ತು ಸಭೆಯಲ್ಲಿರುವ ಕಪಟ ಭಕ್ತರಿಂದ ಸಭೆಯು ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

1. ಸುಳ್ಳು ಸಹೋದರರು (ಗಲಾ. 2:4).
2. ಭಕ್ತಿಯ ವೇಷವಿದ್ದು ಅದರ ಬಲ ಬೇಡವೆನ್ನುವವರು (2 ತಿಮೊ. 3:5)
3. ಒಳಗಿನ ವ್ಯತ್ಯಾಸ ಬೋಧನೆಗಳು (ಅ.ಕೃ. 20:30, 2 ಪೇತ್ರ. 2:1–3).
4. ಸುಳ್ಳು ಅಪೋಸ್ತಲರು (2 ಕೊರಿ. 11:13–15, ಪ್ರಕ. 2:2).
5. ಗುಂಪುಗಾರಿಕೆ ಮಾಡುವವರು (1 ಕೊರಿ. 1:10–13).
6. ವಿಷದ ಬೇರನ್ನು ಹರಡುವವರು (ಇಬ್ರಿ. 12:15).
7. ನಾಚಿಕೆಗೆಟ್ಟ ಕೃತ್ಯ ನಡೆಸುವವರು (ಯೂದ. 1:4).

1) ಸಭೆಗೆ ಕಳ್ಳತನದಿಂದ ಸೇರಿಕೊಂಡ ಸುಳ್ಳು ಸಹೋದರರು ಅಲ್ಲಿ ಇದ್ದದ್ದರಿಂದ ಬಲತ್ಕಾರ ನಡೆದೀತೆಂಬ ಭಯವಿತ್ತು. ಅವರು ನಮ್ಮನ್ನು ದಾಸತ್ವದೊಳಗೆ ಸಿಕ್ಕಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿ ನಮಗೆ ದೊರಕಿರುವ ಸ್ವಾತಂತ್ರ್ಯವನ್ನು ಗೂಢವಾಗಿ ವಿಚಾರಿಸುವುದಕ್ಕೆ ಬಂದವರು(ಗಲಾ. 2–4). ಸಭೆಗೆ ಕಳ್ಳತನದಿಂದ ಸೇರಿಕೊಂಡ ಕೆಲವು ಸುಳ್ಳು ಸಹೋದರರು ಗಲಾತ್ಯ ಸಭೆಯಲ್ಲಿ ಇರುವುದನ್ನು ಪೌಲನು ತಿಳಿಸುತ್ತಿದ್ದಾನೆ. ಕಳ್ಳತನದಿಂದ ಅಂದರೆ ಅರ್ಥವೇನು? ಅಂದರೆ ಕ್ರಿಸ್ತನ ಹೊಸ ಒಡಂಬಡಿಕೆಯ ಸಭೆಯಲ್ಲಿ ಸೇರಲು ಒಂದೇ ಒಂದು ನಿಬಂಧನೆ ರಕ್ಷಣೆ ಹೊಂದಿ, ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನವನ್ನು ತೆಗೆದುಕೊಳ್ಳಬೇಕು. ಸಭೆ ಅಂದರೆ ಗ್ರೀಕ್ ಭಾಷೆಯಲ್ಲಿ ಅರ್ಥ ಎಕ್ಲೆಶಿಯಾ (Ecletia) ಎಂದು ಅಂದರೆ ಪಾಪದಿಂದಲೂ, ಲೋಕದಿಂದಲೂ, ಪಾಪದ ದಾಸತ್ವದಿಂದಲೂ, ಯೇಸುವಿನ ರಕ್ತದ ಮೂಲಕ ಬಿಡುಗಡೆ ಹೊಂದಿ ರಕ್ಷಣೆ ಹೊಂದಿದ ದೇವಜನರ ಗುಂಪೆ ಹೊಸ ಒಡಂಬಡಿಕೆಯ ಕ್ರಿಸ್ತನ ಸಭೆ ಅ.ಕೃ. 20:28ರಲ್ಲಿ ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರನ್ನಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ.

ಈ ಕ್ರಿಸ್ತನವರು ಸಭೆಗೆ ಸೇರುವುದು ಹೇಗೆ ? ಅ.ಕೃ. 2:47 ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲೂ ಅವರ ಮಂಡಲಿಗೆ ಸೇರಿಸುತ್ತಿದ್ದನು.

ರಕ್ಷಣೆಯ ಮಾರ್ಗದಲ್ಲಿರುವವರು ಮಾತ್ರ ಕ್ರಿಸ್ತನ ಮಂಡಳಿಗೆ ಅಂದರೆ ಸಭೆಗೆ ಸೇರಿಕೊಳ್ಳುತ್ತಿದ್ದರು ಮತ್ತು ಸಭೆಯ ಸದಸ್ಯರಾಗುತ್ತಿದ್ದರು.

ಸತ್ಯವೇದದಲ್ಲಿ ರಕ್ಷಣೆಯ 3 ಹಂತಗಳ ಕುರಿತಾಗಿ ನೋಡಬಹುದು.

1) ಪಾಪದ ಶಿಕ್ಷೆಯಿಂದ ರಕ್ಷಣೆ ಹೊಂದಿದ್ದೇವೆ (ನರಕದಿಂದ) (ರೋಮ. 6:23, ಯೋಹಾ. 8:11, ರೋಮ. 8:1).
2) ಪಾಪದ ಶಕ್ತಿಯಿಂದ ರಕ್ಷಣೆ ಹೊಂದುತ್ತಿದ್ದೇವೆ (ಅನುದಿನದ ಜೀವಿತದಲ್ಲಿ) (ರೋಮ. 6:4).
3) ಪಾಪದ ಸನ್ನಿಧಿಯಿಂದ ರಕ್ಷಣೆ ಹೊಂದುತ್ತೇವೆ (ಇದು ಕ್ರಿಸ್ತನ ಹಾಗೆ ಆಗುವ ಅನುಭವವಾಗಿದೆ (1 ಯೋಹಾ. 3:1–3).

ರಕ್ಷಣೆ ಹೇಗೆ ಹೊಂದುತ್ತೇವೆ? ಯಾವುದರಿಂದ ರಕ್ಷಣೆ ಹೊಂದುತ್ತೇವೆ ? ಪಾಪದ ಸಂಬಳ ಮರಣ ಎಂದು ತಿಳಿಸುತ್ತದೆ. ಪಾಪದ ಶಿಕ್ಷೆ ಮರಣ ಅಂದರೆ ನಿತ್ಯ ಮರಣ ಅಥವಾ ನಿತ್ಯ ನಿತ್ಯಕ್ಕೂ ನರಕದಲ್ಲಿ ಯಾತನೆಪಡುವ ಅನುಭವ (ರೋಮ. 6:23).

ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ ಶಾಪಗ್ರಸ್ಥರೇ ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ. (ಮತ್ತಾ. 25:41)

ಇದಲ್ಲದೆ ನಿನ್ನ ಕೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕತ್ತರಿಸಿಬಿಡು ಎರಡು ಕೈಯುಳ್ಳವನಾಗಿದ್ದು ಅರದ ಬೆಂಕಿಯಾಗಿರುವ ನರಕದಲ್ಲಿ ಬೀಳುವುದಕ್ಕಿಂತ ಕೈ ಕಳಕೊಂಡವನಾಗಿ ಜೀವದಲ್ಲಿ ಸೇರುವದು ನಿನಗೆ ಉತ್ತಮ. (ಮಾರ್ಕ. 9:43)

ಯೆಹೋವನು ತನ್ನ ಪ್ರಜೆಗೆ ಪ್ರಸನ್ನನಾದನು; ದೀನರನ್ನು ರಕ್ಷಣೆಯಿಂದ ಭೂಷಿಸುತ್ತಾನೆ (ಕೀರ್ತ. 149:4).

ಮಾರ್ಕ. 9:4–8 ನರಕದಲ್ಲಿ ಅವರನ್ನು ಕಡಿಯುವ ಹುಳ ಸಾಯುವುದಿಲ್ಲ. ಪ್ರಕ. 20:15 ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು. ಪ್ರಕ. 20:10 ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ; ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆ ಪಡುತ್ತಿರುವರು. ಪ್ರಕ. 19:20 ಇದಲ್ಲದೆ ಮೃಗದ ಮುಂದೆ ಮಹತ್ಕಾರ್ಯಗಳನ್ನು ಮಾಡಿ ಮೃಗದ ಗುರುತು ಹಾಕಿಸಿಕೊಂಡವರನ್ನೂ ಅದರ ವಿಗ್ರಹಕ್ಕೆ ನಮಸ್ಕರಿಸಿದವರನ್ನೂ ಮರುಳುಗೊಳಿಸಿದ ಆ ಸುಳ್ಳು ಪ್ರವಾದಿಯೂ ಅದರ ಜೊತೆಯಲ್ಲಿ ಸೆರೆಸಿಕ್ಕಿದನು. ಇವರಿಬ್ಬರೂ ಜೀವ ಸಹಿತವಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು. ಅವನ ಹಿಂದೆ ಮೂರನೆಯವನಾದ ಒಬ್ಬ ದೇವದೂತನು ಬಂದು ಯಾವನಾದರೂ ಮೊದಲನೆಯ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕಾರ ಮಾಡಿ ತನ್ನ ಹಣೆಯ ಮೇಲಾಗಲಿ, ಕೈಯ ಮೇಲಾಗಲಿ ಗುರುತು ಹಾಕಿಸಿಕೊಂಡರೆ ಅವನು ಸಹ ದೇವರ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಹಾಕಿದ ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯುವನು; ಪರಿಶುದ್ಧ ದೇವದೂತರ ಮುಂದೆಯೂ, ಯಜ್ಞದ ಕುರಿಯಾದಾತನ ಮುಂದೆಯೂ, ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆಪಡುವನು. ಅಂಥವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ; ಮೃಗಕ್ಕೆ ಮತ್ತು ಅದರ ವಿಗ್ರಹಕ್ಕೆ ನಮಸ್ಕಾರ ಮಾಡುವವರೂ ಅದರ ಹೆಸರನ್ನು ಸೂಚಿಸುವ ಗುರುತನ್ನು ಹಾಕಿಸಿಕೊಂಡವರೆಲ್ಲರೂ ಹಗಲಿರುಳು ಉಪಶಮನವಿಲ್ಲದೆ ಯಾತನೆಪಡುವರು ಎಂದು ಮಹಾ ಶಬ್ಧದಿಂದ ಹೇಳಿದನು. (ಪ್ರಕ. 14:9–11)

ದೇವರ ವಾಕ್ಯದ ಮೂಲಕ ನಾವು ತಿಳಿದುಕೊಳ್ಳುವ ಮೂಲ ಸತ್ಯವೇನೆಂದರೆ ನಾವು ಜನ್ಮ ಪಾಪಿಗಳು. ಕರ್ಮ ಪಾಪದಲ್ಲಿ ಜೀವಿಸುವವರು. ಪಾಪ ಮಾಡಿದ್ದರಿಂದ ನಾವು ಪಾಪಿಗಳಲ್ಲ. ಪಾಪದಲ್ಲಿ ಹುಟ್ಟಿದ್ದರಿಂದ ನಾವು ಪಾಪಿಗಳು. ಕೀರ್ತ. 51:5 ರಲ್ಲಿ ದಾವೀದನು ಹುಟ್ಟಿದಂದಿನಿಂದ ನಾನು ಪಾಪಿಯೇ ಮಾತೃ ಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ. ಪಾಪ ಮಾಡದೆ ಧರ್ಮವನ್ನೇ ಆಚರಿಸುತ್ತಿರುವ ಸತ್ಪುರುಷನು ಲೋಕದಲ್ಲಿ ಇಲ್ಲವೇ ಇಲ್ಲ. (ಪ್ರಸ. 7:20) ಲೋಕದಲ್ಲಿ ಹುಟ್ಟಿದ ಮನುಷ್ಯರೆಲ್ಲರೂ ಪಾಪಿಗಳಾಗಿರುವುದರಿಂದ ಸತ್ಯವೇದ ಹೇಳುತ್ತದೆ, ಪಾಪದ ಶಿಕ್ಷೆ ನಿತ್ಯ ಮರಣ ಅದುವೇ ಬೆಂಕಿ ಗಂಧಕಗಳಿಂದ ಉರಿಯುವ ಕೆರೆ. ಆತನು ಪಾಪದ ಶಿಕ್ಷೆಯನ್ನು ನಿತ್ಯ ನಿತ್ಯಕ್ಕೂ ಅನುಭವಿಸಲು ಹೋಗಬೇಕು. ಒಂದು ಸಲ ಒಬ್ಬ ಮನುಷ್ಯ ಪಾಪದ ಶಿಕ್ಷೆಯಾದ ನಿತ್ಯ ನರಕಕ್ಕೆ ಹೋದರೆ ಜೀವಿಸುತ್ತಿರುವ ಆತನ ಬಂಧುಗಳು ಆತನಿಗಾಗಿ ಪೂಜೆ ಮಾಡಿದರೆ, ಉತ್ತರ ಕ್ರಿಯೆ ಮಾಡಿದರೆ, ಆತನಿಗಾಗಿ ಪ್ರಾರ್ಥನೆ ಮಾಡಿದರೆ ಅವನಿಗೆ ನರಕದಿಂದ ಬಿಡುಗಡೆ ಸಿಗುವುದಿಲ್ಲ. ಅದಕ್ಕಾಗಿ ಕರ್ತನಾದ ಯೇಸುಕ್ರಿಸ್ತನು 2 ಸಾವಿರ ವರ್ಷಗಳ ಹಿಂದೆ ಮನುಷ್ಯನಾಗಿ ಲೋಕಕ್ಕೆ ಬಂದು ನಮ್ಮ ಪಾಪಗಳ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡನು. ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು. ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು. (ಯೆಶಾ. 53:4) ಯೆಶಾ. 53:11–12ರಲ್ಲಿ ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು; ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹು ಜನರನ್ನು ಧರ್ಮ ಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು. ಇವನು ಇಂಥವನಾಗಿರುವುದರಿಂದ ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು. ಇವನು ಬಲಿಷ್ಟರೊಡನೆ ಸೂರೆಯನ್ನು ಹಂಚಿಕೊಳ್ಳುವನು. ತನ್ನ ಪ್ರಾಣವನ್ನು ಧಾರೆಯರೆದು ಮರಣಹೊಂದಿ ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು ಬಹುಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆ ಮಾಡಿದನಲ್ಲಾ.

ಕರ್ತನಾದ ಯೇಸುಕ್ರಿಸ್ತನು ಪ್ರತಿ ಮನುಷ್ಯನನ್ನು ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡುಗಡೆ ಮಾಡಿ ನಿತ್ಯಜೀವ ಕೊಡುವ ಉದ್ದೇಶದಿಂದ ಲೋಕದಲ್ಲಿರುವ ಪ್ರತಿಯೊಬ್ಬ ಮನುಷ್ಯನ ಪಾಪವನ್ನು ತನ್ನ ಮೇಲೆ ತೆಗೆದುಕೊಂಡು ಕಲ್ವಾರಿ ಕ್ರೂಜೆಯಲ್ಲಿ ಪ್ರಾಣಕೊಟ್ಟು ಹೂಣಲ್ಪಟ್ಟು 3ನೇ ದಿನದಲ್ಲಿ ಎದ್ದು ಬಂದನು.

ಯಾರೆಲ್ಲ ತಾವು ಪಾಪಿಗಳೆಂದು ದೇವರ ಮುಂದೆ ಒಪ್ಪಿಕೊಂಡು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಪಾಪಗಳನ್ನು ಅರಿಕೆಮಾಡಿ ಬಿಟ್ಟುಬಿಟ್ಟು ಯೇಸುಕ್ರಿಸ್ತನ ತನ್ನ ಪಾಪಕ್ಕಾಗಿ ಕ್ರೂಜೆಯಲ್ಲಿ ಸತ್ತು ಹೂಣಲ್ಪಟ್ಟು, 3ನೇ ದಿನದಲ್ಲಿ ಮರಣದಿಂದ ಎದ್ದು ಬಂದನು ಎಂದು ಹೃದಯದಲ್ಲಿ ನಂಬಿ ಬಾಯಲ್ಲಿ ಅರಿಕೆ ಮಾಡಿ ಯೇಸುವೇ ನನ್ನ ರಕ್ಷಕನು ಒಡೆಯನೆಂದು ಅಂಗೀಕಾರ ಮಾಡುತ್ತಾರೋ ಅವರು ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡುಗಡೆ ಹೊಂದುತ್ತಾರೆಂದು ಸತ್ಯವೇದ ತಿಳಿಸುತ್ತದೆ (ರೋಮ. 10:9–10, ಯೋಹಾ. 1:12–13) ಇವರು (ಅ.ಕೃ. 2:47) ವಚನ ಪ್ರಕಾರ ರಕ್ಷಣೆಯ ಮಾರ್ಗದಲ್ಲಿ ಇರುವವರು. ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಆತನು ನಿನ್ನ ಪ್ರಾಂತದೊಳಗೆ ಸೌಭಾಗ್ಯವನ್ನುಂಟು ಮಾಡುತ್ತಾನೆ; ಶ್ರೇಷ್ಠವಾದ ಗೋದಿಯಿಂದ ನಿನ್ನನ್ನು ತೃಪ್ತಿಗೊಳಸುತ್ತಾನೆ (ಕೀರ್ತ. 147:14).

# ಸಾಕ್ಷಿಯ ಸ್ವರ

* **ವಿಶ್ವನಾಥ್ ಪೂಜಾರಿ, ಉದ್ಯಾವರ** ಹಲವು ವರುಷದಿಂದ ನಾನು ಕುಡಿಕತನದ ಚಟಕ್ಕೆ ಒಳಗಾಗಿದೆ ಪಾ॥ ಸುನಿಲ್ ಜಾನ್ ಡಿ'ಸೋಜಾರವರು ಪ್ರಾರ್ಥಿಸಿದಾಗ ಬಿಡುಗಡೆ ಮತ್ತು ಮನಸ್ಸಿಗೆ ಸಮಾಧಾನ ಸಿಕ್ಕಿತು. ಮತ್ತು ಕೈಕಾಲು ನಡುಗುವಿಕೆಯಿಂದ ಬಿಡುಗಡೆಯನ್ನು ದೇವರು ಕೊಟ್ಟಿದ್ದಾನೆ ಆತನ ನಾಮಕ್ಕೆ ಸ್ತೋತ್ರ.

* **ವಸಂತಿ ಪೂಜಾರಿ, ಉದ್ಯಾವರ** ಕೆಲವು ದಿವಸದಿಂದ ನಾನು ಎದೆನೋವಿನಿಂದ ಬಳಲುತ್ತಿದ್ದೆ, ಭಾನುವಾರದ ಆರಾಧನೆಯಲ್ಲಿ ಸಭಾಪಾಲಕರು ಪ್ರಾರ್ಥಿಸಿದಾಗ ಎದೆನೋವಿನಿಂದ ನನಗೆ ದೇವರು ಬಿಡುಗಡೆ ಮಾಡಿದ್ದಾರೆ ಕರ್ತನಿಗೆ ಸ್ತೋತ್ರ.

* **ಸರಿತಾ ಕೇನೆತ್, ಮಲ್ಪೆ ಗರಡಿಮಜಲು** ಬಿದ್ದು ಕಾಲಿಗೆ ಪೆಟ್ಟಾಗಿತ್ತು, ನನಗೆ ಕುಣಿದು ಆರಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಸಭಾಪಾಲಕರು ಪ್ರಾರ್ಥಿಸುವ ಸಮಯದಲ್ಲಿ ಕಾಲು ನೋವಿನಿಂದ ಸಂಪೂರ್ಣ ಬಿಡುಗಡೆಯಾಯಿತು.

* **ಪ್ರಫುಲ್ಲಾ, ಶಂಕರಪುರ** ಅನೇಕ ವರ್ಷಗಳಿಂದ ನನಗೆ ತುಂಬಾ ತಲೆನೋವು ಬರುತ್ತಿತ್ತು. ಮಾತ್ರೆ ತೆಗೆದುಕೊಂಡರೆ ಮಾತ್ರ ತಲೆನೋವು ಕಡಿಮೆಯಾಗುತ್ತಿತ್ತು. ಪಾ॥ ಸುನಿಲ್ ಜಾನ್ ಡಿ'ಸೋಜಾರವರು ಪ್ರಾರ್ಥಿಸುವ ಸಮಯದಲ್ಲಿ ನನಗೆ ತಲೆನೋವಿನಿಂದ ಬಿಡುಗಡೆಯಾಯಿತು.

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯು ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ಯಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಷಿಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

**– ಸಂಪಾದಕರು, ದೇವರ ಸ್ವರ.**

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

ನಮ್ಮ ಕರ್ತನು ದೊಡ್ಡವನೂ ಪರಾಕ್ರಮಿಯೂ ಆಗಿದ್ದಾನೆ; ಆತನ ಜ್ಞಾನವು ಅಪರಿಮಿತವಾಗಿದೆ (ಕೀರ್ತ. 147:5).

# ಯೌವನಸ್ಥರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಮಾತ್ರವಲ್ಲದೇ ನಾವು ಅಪೊ 8:15, 16, 17ನೇ ವಾಕ್ಯಗಳಲ್ಲಿ ಗಮನಿಸುವಾಗ – **"ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮವರವು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆಮಾಡಿದರು. ಯಾಕೆಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮ ವರವನ್ನು ಹೊಂದಿದರು".** ಅನೇಕರು ಇಂದು ದೀಕ್ಷಾಸ್ನಾನವನ್ನು ಮಾಡಿಸಿಕೊಂಡು ಅದರಲ್ಲಿಯೇ ತೃಪ್ತರಾಗಿ ಬಿಡುತ್ತಾರೆ, ಆದರೆ ಪವಿತ್ರಾತ್ಮನನ್ನು ಹೊಂದಿಕೊಳ್ಳುವುದರ ಬಗ್ಗೆ ಸ್ವಲ್ಪವು ಕಾಳಜಿಯಿರುವುದಿಲ್ಲ. ಈ ಸಂಚಿಕೆಯನ್ನು ಓದುತ್ತಿರುವ ನೀವು ಒಂದು ವೇಳೆ ಇದೇ ಪರಿಸ್ಥಿತಿಯಲ್ಲಿರಬಹುದು. ಆದರೆ ದೇವರು ನಿಮ್ಮ ಕುರಿತಾಗಿ ಕಾಳಜಿ ವಹಿಸಿರುವುದರಿಂದ ಆತನು ಈ ಸಾಲುಗಳನ್ನು ನಿಮಗಾಗಿ ಇಲ್ಲಿ ಬರೆದಿದ್ದಾನೆ. ನೀವು ಈಗಲೇ ಪವಿತ್ರಾತ್ಮನನ್ನು ಅಂಗೀಕರಿಸುವುದಾದರೆ ಈಗಲೇ ಆ ಪವಿತ್ರಾತ್ಮನ ವರವನ್ನು ನೀವು ಈ ಸಂಚಿಕೆಯನ್ನು ಓದುತ್ತಿರುವಾಗಲೇ ಹೊಂದುವಿರಿ. ಪವಿತ್ರಾತ್ಮನು ಈಗ ನಿಮ್ಮನ್ನು ಹೇಗೆ ನಡೆಸುತ್ತಿದ್ದನೋ ಅದಕ್ಕೆ ಒಪ್ಪಿಸಿಕೊಡಿ ಮತ್ತು ಆತನು ಹೇಳುವ ಕಾರ್ಯವನ್ನು ಈಗಲೇ ಮಾಡಿಬಿಡಿ.

ಅಪೊ. 19:2ರಿಂದ 6ರವರೆಗೆ ನೋಡುವಾಗ ಪೌಲನು – ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ ಇಲ್ಲ, ಪವಿತ್ರಾತ್ಮ ವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು. ಅವನು – ನೀವು ಯಾವದನ್ನು ನಂಬಿ ದೀಕ್ಷಾಸ್ನಾನಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು. ಅದಕ್ಕೆ ಪೌಲನು ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬದಾಗಿ ಜನರಿಗೆ ಹೇಳಿದನು ಎಂದು ಹೇಳಲು ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು; ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು...

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೇ, ಅವರು ಹೊಂದಿದ ದೀಕ್ಷಾಸ್ನಾನ ಯಾರ ಹೆಸರಿನಲ್ಲಿ? ಇಂದು ಅನೇಕರು ಅನೇಕ ರೀತಿಯಾದ ದೀಕ್ಷಾಸ್ನಾನಗಳ ಕುರಿತು ಮಾತನಾಡುತ್ತಾ ತರ್ಕ ಮಾಡುತ್ತಾ ಇಲ್ಲ–ಸಲ್ಲದ ಭೋಧನೆಗಳನ್ನು, ಗಲಿ–ಬಿಲಿಗಳನ್ನು, ಗೊಂದಲಗಳನ್ನು ಹುಟ್ಟುಹಾಕುತ್ತಿದ್ದರೆಯೇ ಹೊರತು ಬೇರೆ ಯಾವ ಪ್ರಯೋಜನವು ಇಲ್ಲ. ಕೆಲವರು ಕೇವಲ ಯೆಹೋವನ ಹೆಸರಿನಲ್ಲಿ, ಇನ್ನು ಕೆಲವರು ಕೇವಲ ಯೇಸುವಿನ ಹೆಸರಿನಲ್ಲಿ, ಇನ್ನು ಕೆಲವರು ತಮಗೆ ಅನುಕೂಲವಾದ ಹೆಸರಿನಲ್ಲಿ, ಮತ್ತೆ ಕೆಲವರು ಯಾವುದೋ ಹೆಸರಿನಲ್ಲಿ... ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯನ್ನೇ ಮಾಡುತ್ತಾ ಹೋಗಬೇಕಾಗುತ್ತದೆ. ಆದರೆ ಪವಿತ್ರಾತ್ಮನು ಬರುವುದು ನಮ್ಮ ಹೆಸರಿನಲ್ಲಿಯೋ ಅಥವಾ ನಮಗೆ ಬೇಕಾದ ರೀತಿಯಲ್ಲಿಯೋ ಅಲ್ಲ. ಬದಲಾಗಿ ಯೇಸುವಿನ ಹೆಸರಿನಲ್ಲಿ. ಇಂದು ನಿನ್ನಲ್ಲಿಯೂ ಇಂಥದ್ದೇ ಗೊಂದಲವಿದ್ದರೆ, ಓದಿದ ವಾಕ್ಯವನ್ನು ನಂಬು ಮತ್ತು ಅದರಂತೆ ನಿನ್ನನ್ನು ಒಪ್ಪಿಸಿಕೊಡು. ಆಗ ಖಂಡಿತವಾಗಿ ಪವಿತ್ರಾತ್ಮನು ನಿನ್ನ ಮೇಲೆ ಬರುವನು.

ನಿಮಗೆ ನಾನು ಈಗಾಗಲೇ ಹೇಳಿದ ಹಾಗೆ, ಕೇವಲ ಹಾರಾಡುವ, ಚಿರಾಡುವ ಅಥವಾ ಒದಾಡುವ ಅನುಭವಕ್ಕಾಗಿ ಪವಿತ್ರಾತ್ಮನು ಬರುವಂಥವನಲ್ಲ. ಪರಲೋಕದಿಂದ ಒಂದು ಉದ್ದೇಶದೊಂದಿಗೆ ಆತನು ಬಂದವನಾಗಿದ್ದಾನೆ. ನಾವು ಪರಲೋಕದಿಂದ ಹೊಂದಿದ ಎಲ್ಲ ವಾಗ್ದಾನಗಳನ್ನು ಹೊಂದಲಿರುವೆವು ಎಂಬ ದೃಢನಿಶ್ಚತೆಯಾಗಿ ಪವಿತ್ರಾತ್ಮನನ್ನು ನಮ್ಮ ಖಾತ್ರಿ (Guarantee)ಯಾಗಿ ನಮಗೆ ಕೊಡಲ್ಪಟ್ಟಿದ್ದಾರೆ. ಅದನ್ನು ನಾವು ಎಫೆಸ 1:13,14ರಲ್ಲಿ ಹಾಗೂ ಪವಿತ್ರಾತ್ಮನ ಮೂಲಕ ನಾವು ದೇವರಿಗೆ ನಿವಾಸಸ್ಥಾನವಾಗಿ ಕಟ್ಟಲ್ಪಡುತ್ತಾ ಇದ್ದೇವೆ ಎಂದು ಎಫೆಸ 2:22ರಲ್ಲಿ ನೋಡಬಹುದು.

ಇಂದು ಪವಿತ್ರಾತ್ಮನ ಬಗ್ಗೆ ನಿನ್ನಲ್ಲಿ ಬೇರೆ ತಪ್ಪಾದ ಮನೋಭಾವನೆ ಅಥವಾ ತಿಳುವಳಿಕೆ ಇದ್ದಲ್ಲೀ, ಇಂದೇ ಅದಕ್ಕಾಗಿ ಪಶ್ಚಾತಾಪಪಟ್ಟು ಪವಿತ್ರಾತ್ಮನನ್ನು ಅಂಗೀಕರಿಸು. ನೀನು ಇಂದಿನಿಂದ ಪವಿತ್ರಾತ್ಮನೊಂದಿಗೆ ನಡೆಯುವಿ. ಯಾಕೆಂದರೆ ಸ್ವತ: ಯೇಸುವು ಮತ್ತಾಯ 12:31ರಲ್ಲಿ ಮನುಷ್ಯರು ಮಾಡುವ ಪ್ರತಿಯೊಂದು ಪಾಪಕ್ಕೂ ದೂಷಣೆಗೂ ಕ್ಷಮಾಪಣೆ ಉಂಟಾಗುವುದು; ಆದರೆ ಪವಿತ್ರಾತ್ಮದೂಷಣೆಗೆ ಕ್ಷಮಾಪಣೆಯಿಲ್ಲ. ಯಾವನಾದರೂ ಮನುಷ್ಯಕುಮಾರನಿಗೆ ವಿರೋಧವಾಗಿ ಮಾತಾಡಿದರೆ ಅವನಿಗೆ ಇಹದಲ್ಲಾಗಲಿ ಪರದಲ್ಲಾಗಲಿ

ಯೆಹೋವನು ದೀನರಿಗೆ ಆಧಾರವಾಗಿದ್ದಾನೆ; ದುಷ್ಟರನ್ನು ನೆಲ್ಲಕ್ಕೆ ಹತ್ತಿಸಿಬಿಡುತ್ತಾನೆ
(ಕೀರ್ತ. 147:6).

ಕ್ಷಮಿಸಲ್ಪಡುವದಿಲ್ಲ. ಒಂದು ವೇಳೆ ನಿಮಗೆ ತಿಳಿಯದೇ ಪವಿತ್ರಾತ್ಮನಿಗೆ ವಿರುದ್ಧ ಪಾಪಮಾಡಿದ್ದಲ್ಲೀ ಅಥವಾ ದೂಷಿಸಿದ್ದಲ್ಲೀ ಈಗಲೇ ಪಶ್ಚಾತಾಪದೊಂದಿಗೆ ಮಾನಸಾಂತರದೊಂದಿಗೆ ಕ್ಷಮೆಯನ್ನು ಕೇಳು. ಕರ್ತನು ಕ್ಷಮಿಸುವನು. ಮಾತ್ರವಲ್ಲದೇ, ಪವಿತ್ರಾತ್ಮನೇ ಇಂದಿನಿಂದ ನಿನ್ನ ಕೈಗಳನ್ನು ಹಿಡಿದು ಕರ್ತನ ಮಾರ್ಗದಲ್ಲಿ ನಡೆಸುವನು.

ಮುಂದಿನ ಸಂಚಿಕೆಗಳಲ್ಲಿ ಬಹಳಷ್ಟನ್ನು ಪವಿತ್ರಾತ್ಮನ ಸಹಾಯದೊಂದಿಗೆ ಕಲಿಯೋಣ. ದಯವಿಟ್ಟು ನನಗಾಗಿ, ನನ್ನ ಕುಟುಂಬಕ್ಕಾಗಿ ಮತ್ತು ಸೇವೆಗಾಗಿ ನಿಮ್ಮ ಪ್ರಾರ್ಥನೆಯಲ್ಲಿ ಕರ್ತನ ಬಳಿ ಪ್ರಾರ್ಥಿಸಿರಿ. ನಿಮ್ಮ ಸಲಹೆಗಳನ್ನು ಮತ್ತು ಕರ್ತನು ನಿಮ್ಮೊಂದಿಗೆ ಮಾತನಾಡಿರುವುದನನ್ನು ತಪ್ಪದೇ ನನಗೆ ಬರೆದು ಕಳುಹಿಸಿ. ನನ್ನ ಇ–ಮೇಲ್: jsma2j@gmail.com. ಕರ್ತನು ನಿಮ್ಮನ್ನು ಹೇರಳವಾಗಿ ಆರ್ಶೀವದಿಸಲಿ.

ಮುಂದುವರೆಯುವದು...

ಕರ್ತನಾದ ಯೇಸುಕ್ರಿಸ್ತನಲ್ಲಿ ನಿಮ್ಮವ

**ಸಭಾ॥ ಜಾನ್ ಸ್ಟೀಫನ್ ಮೊಂತೆರೋ**

---

# ಸ್ಥಳೀಯ ಮತ್ತು ವಿದೇಶ ಸುದ್ಧಿ

* ಹಸಿರು ಮನೆಗಳ ನಿರ್ಮಾಣಕ್ಕೆ ಪ್ರೋತ್ಸಾಹ :– ಭಾರತೀಯ ಕೈಗಾರಿಕಾ ಒಕ್ಕೂಟದ ಅಂಗಸಂಸ್ಥೆ ಭಾರತೀಯ ಹಸಿರು ಮನೆಗಳ ಸಮಿತಿ ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಗ್ರೀನ್ ಹೋಮ್ಸ್ ಕಾನ್ಫರೆನ್ಸ್‌ನಲ್ಲಿ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಜೊತೆ ಹಸಿರು ಮನೆಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವ ಸಂಬಂಧ ಒಪ್ಪಂದ ಪತ್ರಕ್ಕೆ ಸಹಿ ಹಾಕಿದೆ. ಈ ಒಪ್ಪಂದದಿಂದ ಹಸಿರು ಮನೆಗಳ ನಿರ್ಮಾಣದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ನಾಯಕತ್ವ ವಹಿಸುವ ಹಾಗೆ ಇನ್ನು ಕೆಲವೇ ವರ್ಷಗಳಲ್ಲಿ ಬೆಳೆಯಲಿದೆ.

* 52 ನೇ ಎಟಿಪಿ ಕಿರೀಟ :– ಭಾರತದ ಡಬಲ್ಸ್ ತಜ್ಞಲಿಯಾಂಡರ್‌ಪೇಸ್ ಪ್ರಸಕ್ತ ಋತುವಿನಲ್ಲಿ ಮೊದಲ ಪ್ರಶಸ್ತಿ ಗೆಲುವು ಕಂಡಿದ್ದಾರೆ. ಕೆನಡಾದ ಡೇನಿಯಲ್ ನೆಸ್ಟರ್ ಜತೆಗೂಡಿ ವಿನ್‌ಸ್ಟನ್‌ಸಲೇಮ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಕಿರೀಟ ಒಲಿಸಿಕೊಂಡಿದ್ದಾರೆ. ಇದು ಪೇಸ್ ಪಾಲಿಗೆ ವೃತ್ತಿ ಜೀವನದ 52ನೇ ಎಟಿಪಿ ಡಬಲ್ಸ್ ಪ್ರಶಸ್ತಿಯಾಗಿದೆ.

* ವಿಶ್ವದ ಮೂರನೇ ಒಂದು ಭಾಗ ಆಹಾರ ವ್ಯರ್ಥ :– ಪ್ರಪಂಚದಲ್ಲಿ ತಯಾರಿಸಲಾಗುವ ಮೂರನೇ ಒಂದು ಭಾಗದ ಆಹಾರ ಪದಾರ್ಥವು ವ್ಯರ್ಥವಾಗುತ್ತಿದೆ ಎಂಬ ಆಘಾತಕಾರಿ ವಿಚಾರವನ್ನು ವಿಶ್ವಸಂಸ್ಥೆ ತಿಳಿಸಿದೆ. ವ್ಯರ್ಥವಾಗುತ್ತಿರುವ ಈ ಆಹಾರದ ಬೆಲೆಯು 750 ಶತಕೋಟಿ ಡಾಲರ್‌ಗಳಾಗಿವೆ ಎಂದು ವಿಶ್ವಸಂಸ್ಥೆ ಆಹಾರ ಭದ್ರತಾ ವಿಭಾಗದ ಮಹಾ ನಿರ್ದೇಶಕರು ತಿಳಿಸಿದ್ದಾರೆ.

* ಭೂಮಿಯ ಮೇಲಿನ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಹಾನಿಯುಂಟು ಮಾಡುವ ಮತ್ತು ಬಾಹ್ಯಾಕಾಶದಲ್ಲಿ ಗಗನಯಾನಿಗಳ ಜೀವಕ್ಕೆ ಸಂಚಕಾರ ತಂದೊಡ್ಡುವ ಅಪಾಯಕಾರಿ ವಿಶ್ವವಿಕಿರಣ ಕಾಸ್ಮಿಕ್ ರೇಸ್‌ಗಳ ಉಗಮದ ರಹಸ್ಯವನ್ನು ಬೇಧಿಸುವ ಸನಿಹಕ್ಕೆ ವಿಜ್ಞಾನಿಗಳು ಬಂದಿದ್ದಾರೆ.

* ಆರ್ಥಿಕ ಪುನಶ್ಚೇತನಕ್ಕೆ ಸಾಮೂಹಿಕ ಕ್ರಮ :– ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಕೈಗೊಂಡಿರುವ ಅಸಂಪ್ರದಾಯಿಕ ಹಣಕಾಸು ವ್ಯವಸ್ಥೆಯ ವಿಸ್ತರಣೆಯ ಮತ್ತು ಭಾರತದಂತಹ ಅಭಿವೃದ್ಧಿಶೀಲ ಹಾಗೂ ಹಿಂದುಳಿದ ರಾಷ್ಟ್ರಗಳ ಮೇಲೆ ವ್ಯತಿರಕ್ತ ಪರಿಣಾಮ ಬೀರುವ ದಿಢೀರ್ ನೀತಿಗಳನ್ನು ಅನುಸರಿಸಿರುವ ಮುಂದುವರಿದ ದೇಶಗಳನ್ನು ಪ್ರಧಾನಿ ಮನಮೋಹನ್‌ಸಿಂಗ್ ತರಾಟೆಗೆ ತೆಗೆದುಕೊಂಡು ಪ್ರತಿಕೂಲ ಪರಿಣಾಮಗಳನ್ನು ಉದಾಹರಿಸಿದ್ದಾರೆ.

* ಜಾಗತಿಕ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಕುಸಿದು ಚಿನ್ನದ ಬೆಲೆ ಗಗನಮುಖಿಯಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಭರಪೂರ ಲಾಭ ತಂದಕೊಡಬೇಕಿದ್ದ ಹಟ್ಟಿ ಚಿನ್ನದ ಗಣಿ ಉತ್ಪಾದನೆಯಲ್ಲಿ ಹಿನ್ನಡೆ ಅನುಭವಿಸಿದೆ. ಚಿನ್ನವನ್ನೇ ಉತ್ಪಾದಿಸುವ ದೇಶದ ಏಕೈಕ ಸರಾಸರಿ ಸಾಮ್ಯದ ಉದ್ದಿಮೆ 2012–13 ಸಾಲಿನಲ್ಲಿ ಕಳಪೆ ಸಾಧನೆ ತೋರಿದೆ.

ಯೆಹೋವನು ಕುಗ್ಗಿದವರನ್ನು ಉದ್ಧರಿಸುತ್ತಾನೆ. ಯೆಹೋವನು ನೀತಿವಂತರನ್ನು ಪ್ರೀತಿಸುತ್ತಾನೆ (ಕೀರ್ತ. 146:8).

# ಡಿಸೆಂಬರ್ 31

ವಯಸ್ಕರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವುದಕ್ಕೆ ಓಡುತ್ತಾ ಇದ್ದೇನೆ"** (ಫಿಲಿ. 3:13).

ಪ್ರಿಯ ದೇವ ಮಕ್ಕಳೇ ಕ್ರಿಸ್ತ ಯೇಸುವಿನ ನಾಮದಲ್ಲಿ ವಂದನೆಗಳು. ದೇವರ ಕೃಪೆಯಿಂದ ಈ ವರ್ಷದ ಕೊನೇ ಭಾಗದಲ್ಲಿ ಬಂದಿದ್ದೇವೆ. ಇದುವರೆಗೆ ನಮ್ಮನ್ನು ನಡೆಸಿದ ದೇವಾಧಿ ದೇವನಿಗೆ ಕೋಟಿ ಸ್ತೋತ್ರಗಳು. ಡಿಸೆಂಬರ್ ತಿಂಗಳು ಬಂದಾಗ ಒಂದೆಡೆ ಹೋ ಎಷ್ಟು ಬೇಗ ವರ್ಷ ಕಳೆಯಿತು ಎಂಬ ಆಶ್ಚರ್ಯವು ಮತ್ತೊಂದೆಡೆ ಹೊಸ ವರ್ಷ ಬಂತೆಂಬುವುದರ ಹರ್ಷವೂ ಸಾಮಾನ್ಯವಾಗಿ ನಮ್ಮನ್ನು ಕಾಡುವುದು ಸಹಜ. ಅದರಲ್ಲೂ ಡಿಸೆಂಬರ್ 31 ಬಂದಾಗ ಲೋಕವು ಆ ದಿನದಲ್ಲಿ ಹೊಸ ವರುಷವನ್ನು ಎದುರು ನೋಡುವ ಸಂಭ್ರಮದಲ್ಲಿ ಮುಳುಗಿರುತ್ತದೆ. ಬಹಳಷ್ಟು ವಿದ್ಯಾವಂತರು, ಯೌವನ, ಯೌವನಸ್ಥೆಯರು ಲೋಕದಲ್ಲಿ ಆ ದಿನದಲ್ಲಿ ಕುಡಿತ, ಕುಣಿತ, ಮೋಜು ಮಸ್ತಿಯಲ್ಲಿ ಮುಳುಗಿ ಹೊಸ ವರುಷವನ್ನು ಕುಡಿತತನದ ಅಮಲಿನಲ್ಲಿಯೇ ಪ್ರವೇಶಿಸುವರು ಆದರೆ ಪ್ರಿಯ ದೇವ ಮಗುವೆ ದೇವರು ಆ ಮೋಜಿನ ಜೀವಿತದಿಂದ ನಮ್ಮನ್ನು ಬಿಡಿಸಿದ್ದಾರೆ. ಮಾತ್ರವಲ್ಲದೆ ಹೊಸ ವರುಷವನ್ನು ಆತನ ಸನ್ನಿಧಾನದಲ್ಲಿ ಆರಂಭಿಸಬೇಕೆಂದು ಆತನು ಬಯಸುತ್ತಾನೆ. ಹೊಸ ವರುಷ ನಿನ್ನ ಜೀವಿತದಲ್ಲಿ ಹರುಷ ತರಬೇಕಾದರೆ ಕೆಲವೊಂದು ಸಿದ್ಧತೆಯನ್ನು ನಾವು ಮಾಡಬೇಕಾಗಿದೆ. ದೇವರು ಹೇಳುತ್ತಾನೆ, ಹೊಸ ವರುಷದಲ್ಲಿ **"ಇಗೋ ಎಲ್ಲವನ್ನು ಹೊಸತು ಮಾಡುತ್ತೇನೆ"** (ಪ್ರಕ. 21:5). ಆದರೆ ನಾವು ಮಾಡಬೇಕಾದ ಕಾರ್ಯವನ್ನು ಧ್ಯಾನಿಸುವಾ.

1) ಹಳೆಯ ಸಂಗತಿಗಳನ್ನು ಜ್ಞಾಪಕ್ಕೆ ತಂದು ಕೊಳ್ಳಬೇಡಿರಿ (ಯೆಶಾ. 43:18). ಹಳೇ ಸಂಗತಿಗಳು ನಮ್ಮ ಹೊಸ ವರುಷದ ಹರುಷಕ್ಕೆ, ಆಶೀರ್ವಾದಕ್ಕೆ ಖಂಡಿತವಾಗಿ ತಡೆಯಾಗಿರುವುದು. ಕೆಲವರು ಹಳೇ ವರ್ಷದ ಕಹಿ, ಪಾಪ, ದ್ವೇಷವನ್ನು ಇಟ್ಟುಕೊಂಡೇ ಹೊಸ ವರ್ಷವನ್ನು ಪ್ರವೇಶಿಸುವುದರಿಂದ ಹೊಸ ವರ್ಷದಲ್ಲಿದ್ದ ಸಂತೋಷವನ್ನು, ಆಶೀರ್ವಾದವನ್ನು ಕಳೆದು ಕೊಳ್ಳುವರು. ಯೆಹೋವನ ಆಶೀರ್ವಾದವು ಭಾಗ್ಯದಾಯಕವು ಅದು ವ್ಯಸನವನ್ನು ಸೇರಿಸದು (ಜ್ಞಾನೋ. 10:22). ಎಂದು ವಾಕ್ಯ ಸಾರಿ ಹೇಳಿದರೂ ಅವರು ವರ್ಷದಲ್ಲಿ ವ್ಯಸನವನ್ನು ಹೊಂದುತ್ತಾ ಇರುವರು. ಇದಕ್ಕೆ ಕಾರಣ ಹಳೇ ವರ್ಷದ ಹಳೇ ಸಂಗತಿಗಳೇ ಅಡ್ಡಿಯಾಗಿರುತ್ತದೆ. ದೇವರ ವಾಕ್ಯ ಹೇಳುತ್ತದೆ, **"ಯಾರೂ ಹೊಸ ಬಟ್ಟೆಯ ತುಂಡನ್ನು ಹಳೆಯ ವಸ್ತ್ರಕ್ಕೆ ತ್ಯಾಪೆ ಹಚ್ಚುವುದಿಲ್ಲ; ಹಚ್ಚಿದರೆ ಆ ಹೊಸ ತ್ಯಾಪೆಯು ಹಳೇ ವಸ್ತ್ರವನ್ನು ಹಿಂಜುವುದರಿಂದ ಹರಕು ಹೆಚ್ಚಾಗುವುದು. ಹಳೇ ಬುದ್ದಲಿಯಲ್ಲಿ ಹೊಸ ದ್ರಾಕ್ಷಾರಸವನ್ನು ಯಾರು ಹಾಕಿಡುವುದಿಲ್ಲ. ಇಟ್ಟರೆ ಆ ದ್ರಾಕ್ಷಾರಸ ಬುದ್ದಲಿಗಳನ್ನು ಒಡೆದು ದ್ರಾಕ್ಷಾರಸವು ಬುದ್ದಲಿಗಳು ಎರಡೂ ಕೆಟ್ಟುಹೋಗುವುವು** (ಮಾರ್ಕ. 2:21–22). ಹಳೇ ಬಟ್ಟೆ ಹಾಗೂ ಹಳೇ ಬುದ್ದಲಿ ಇವು ನಮ್ಮ ಹಳೇ ಜೀವಿತವನ್ನು ಸೂಚಿಸುತ್ತದೆ. ಇಂದು ಅನೇಕರು ದೇವರು ಕೊಡುವ ಆಶೀರ್ವಾದವನ್ನಾಗಲೀ, ಪವಿತ್ರಾತ್ಮನ ಅಭಿಷೇಕವನ್ನಾಗಲೀ ಹಳೇ ಜೀವಿತದಲ್ಲಿ (ಬದಲಾವಣೆಯಿಲ್ಲದೆ) ಹೊಂದಿಕೊಳ್ಳಲು ಪ್ರಯತ್ನಿಸುವರು. ಆದರೆ ಇದು ನಮ್ಮ ಪ್ರಯೋಜನಕ್ಕೆ ಬರುವುದಿಲ್ಲ. ಯೆಹೋಶುವನು ಹೇಳತ್ತಾನೆ, "ನಿಮ್ಮನ್ನು ಶುದ್ಧಮಾಡಿಕೊಳ್ಳಿರಿ. ಯೆಹೋವನು ನಾಳೆ ನಿಮ್ಮ ಮಧ್ಯದಲ್ಲಿ ಅದ್ಭುತಗಳನ್ನು ನಡಿಸುವನು (ಯೆಹೋ. 3:5). ಹೊಸ ವರುಷವನ್ನು ನೂತನ ಹೃದಯದೊಂದಿಗೆ ನೀನು ಪ್ರವೇಶಿಸುವಿಯಾದರೆ ದೇವರ ಅಸಾಧ್ಯವಾದ ಕಾರ್ಯಗಳನ್ನು ನೀನು ಹೊಸ ವರುಷದಲ್ಲಿ ಹೊಂದಿಕೊಳ್ಳಲು ಸಾಧ್ಯ. ಡಿಸೆಂಬರ್ 31ನೇ ತಾರೀಖಿಗೆ ದೇವ ಮಕ್ಕಳಿಗೆ ಖಂಡಿತವಾಗಿ ಪ್ರಾಮುಖ್ಯವಾದ ದಿನವಾಗಿದೆ. ಏಕೆಂದರೆ ಹೊಸ ವರುಷದಲ್ಲಿ ಹೊಸ ವಾಗ್ದಾನದೊಂದಿಗೆ, ಹೊಸ ಬಲದೊಂದಿಗೆ, ಆಶೀರ್ವಾದದೊಂದಿಗೆ ಪ್ರವೇಶಿಸಬೇಕಾದರೆ ಹಳೆದನ್ನು ಬಿಟ್ಟು ಹೊಸತನ್ನು ಹಿಡಿಯಬೇಕಾಗಿದೆ. ಕೆಲವರು ಸಭೆಯಲ್ಲಿ ಕಹಿಯಾದ ಮನಸ್ಸಿನೊಂದಿಗೆ, ವೈಮನಸ್ಸಿನೊಂದಿಗೆ, ಸೇವಕರೊಂದಿಗಾಗಲಿ, ಸೇವಕಿಯೊಂದಿಗಾಗಲಿ ಇತರ ವಿಶ್ವಾಸಿಗಳೊಂದಿಗಾಗಲಿ ಇರುವರು. ಪ್ರಿಯ ದೇವ ಮಗುವೆ ಎಲ್ಲಾ ಕಹಿ ದ್ವೇಷವನ್ನು ಬಿಟ್ಟು ಕರ್ತನಲ್ಲೂ, ಸಹೋದರ/ಸಹೋದರಿಯಲೂ ಒಂದಾಗುವಾಗಲೇ ಹೊಸ ವರುಷ ನಿನ್ನ ಜೀವಿತದಲ್ಲಿ ಶುಭಕರವಾಗಿರುವುದು.

ಯೆಹೋವನು ಪರದೇಶದವರನ್ನು ಕಾಪಾಡುತ್ತಾನೆ. ಆತನು ಅನಾಥರಿಗೂ ವಿಧವೆಯರಿಗೂ ಆಧಾರವಾಗಿದ್ದಾನೆ (ಕೀರ್ತ. 146:9).

**"ಈಗಲಾದರೋ ಕ್ರೋಧ, ಕೋಪ ಮತ್ಸರ ದೂಷಣೆ, ಬಾಯಿಂದ ಹೊರಡುವ ದುರ್ಭಾಷೆ ಇವುಗಳನ್ನು ವಿಸರ್ಜಿಸಿಬಿಡಿರಿ"** (ಕೊಲೊ. 3:8). ದೇವರು ಹೇಳುವುದನ್ನು ಸ್ವಲ್ಪ ಗಮನಿಸುವ ಪ್ರಿಯರೇ. ಪುರಾತನ ಕಾರ್ಯವನ್ನು ಮರೆತುಬಿಡಿ, ಇಗೋ ಹೊಸ ಕಾರ್ಯವನ್ನು ಮಾಡುವೆನು. ಈಗ ತಲೆದೋರುತ್ತದೆ (ಯೆಶಾ. 43:19). ಇಸ್ರಾಯೇಲ್ ದೇಶದ ಮೊದಲ ರಾಜನಾಗಿ ದೇವರು ಸೌಲನನ್ನು ಆರಿಸಿ ಸಮುವೇಲನ ಮೂಲಕ ಸೌಲನಲ್ಲಿ ನಡೆಯುವ ಗುರುತುಗಳ ವಿಷಯದಲ್ಲಿ ದೇವರು ಪ್ರವಾದಿಯಾದ ಸಮುವೇಲನಿಗೆ ಮೊದಲೇ ತಿಳಿಸಿದ್ದನು. ಆದರೆ ಆ ಗುರುತುಗಳು ಸೌಲನಲ್ಲಿ ಸಂಭವಿಸಿದ ದಿನ ಯಾವುದು ಗೊತ್ತೇ. ಆತನು ನೂತನ ಹೃದಯವನ್ನು ಹೊಂದಿಕೊಂಡಾಗಲೇ **"ಸೌಲನು ಸಮುವೇಲನನ್ನು ಬಿಟ್ಟು ಹೊರಟ ಕೂಡಲೇ ದೇವರು ಅವನಿಗೆ ನೂತನ ಹೃದಯವನ್ನು ಕೊಟ್ಟನು. ಅದೇ ದಿನದಲ್ಲಿ ಆ ಎಲ್ಲಾ ಗುರುತುಗಳು ಸಂಭವಿಸುವವು"** (1 ಸಮು. 10:9). ದೇವ ಮಗುವೇ ದೇವರ ಕಾರ್ಯ, ದೇವರ ಮಾತು, ಗುರುತುಗಳು ನಡೆಯಬೇಕಾದರೆ ನಮ್ಮಲ್ಲಿ ಸಿದ್ಧವುಳ್ಳ ನೂತನ ಹೃದಯಬೇಕಾಗಿದೆ. **"ಹೃದಯದಲ್ಲಿ ನಡೆಯುವುದನ್ನು ದೇವರು ನೋಡಿ ಬಹಳ ಪ್ರತಿಫಲ ಕೊಡುವನು"** (ಮತ್ತಾ. 6:6).

ಅಪೋಸ್ತಲನಾದ ಪೌಲನು ಬರೆಯುತ್ತಾನೆ, ನಾನಂತೂ ಹಿಡಿದುಕೊಂಡವನೆಂದು ನನ್ನನ್ನು ಈವರೆಗೂ ಎಣಿಸಿಕೊಳ್ಳುವುದಿಲ್ಲ. ಆದರೆ ಒಂದು ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವುದಕ್ಕೆ ಎದೆ ಬೊಗ್ಗಿದವನಾಗಿ ಬಿರುದನ್ನು ಗುರಿಮಾಡಿ ಓಡುತ್ತಾ ಇದ್ದೇನೆ (ಫಿಲಿ. 3:13–14). ನಮ್ಮಲ್ಲಿ ಪ್ರವೀಣರಾದವರು ಇದೇ ಅಭಿಪ್ರಾಯವುಳ್ಳವರಾಗಿರೋಣ ಎಂದು ಕೂಡಾ ಆತನು ತಿಳಿಸುತ್ತಾನೆ.

ಸಾಮಾನ್ಯ ಡಿಸೆಂಬರ್ 31 ರಂದು ಉಡುಪಿ, ದಕ್ಷಿಣ ಕನ್ನಡ ಇನ್ನಿತರ ಕಡೆಗಳಿಗೆ ಯೌವನಸ್ಥರೆಲ್ಲರೂ ಸೇರಿ ಹಳೆಯ ಮುದುಕನನ್ನು (ಬೊಂಬೆ ಮಾಡಿಸಿ) ಅದರಲ್ಲಿ ಹಳೇ ವರ್ಷದ ಇಸವಿಯನ್ನು ಬರೆದು ಡ್ಯಾನ್ಸ್, ವಾದ್ಯದೊಂದಿಗೆ ಹನ್ನೆರಡು ಗಂಟೆಗೇ ಸರಿಯಾಗಿ ಆ ಮುದುಕನ ಪ್ರತಿಕೃತಿಯನ್ನು ಘೋಷಣೆಯೊಂದಿಗೆ ಮೆರವಣಿಗೆ ಮಾಡಿ ಬೆಂಕಿ ಹಾಕಿ ಸುಟ್ಟು ಹೊಸ ವರುಷವನ್ನು ಆರಂಭಿಸುತ್ತಾರೆ. ಲೋಕದಲ್ಲಿರುವ ಈ ಜನರು ಹಳೇ ವರುಷದಲ್ಲಿ ನಡೆದ ಘಟನೆಗಳು ದುರ್ಘಟನೆಗಳನ್ನು ದಾಟಿ ಹೊಸ ವರ್ಷದ ಸಂಭ್ರಮವನ್ನು ಆಚರಿಸುವ ರೀತಿಯನ್ನು ನಾವು ಕಾಣಬಹುದು. ದೇವ ಮಕ್ಕಳಾದ ನಾವು ಈ ಕಾರ್ಯವನ್ನು ನೋಡಿ ನಮ್ಮ ಜೀವಿತದಲ್ಲಿಯೂ ಇದೇ ರೀತಿ ಹಳೇ ಸ್ವಭಾವವನ್ನು ಬಿಟ್ಟು ನೂತನ ಸ್ವಭಾವದಿಂದ, ತೀರ್ಮಾನದಿಂದಲೂ ಹೊಸ ವರುಷವನ್ನು ಪ್ರವೇಶಿಸಬಹುದಾಗಿದೆ.

ಪ್ರಿಯ ದೇವ ಮಗುವೆ ಮತ್ತು ಪ್ರಿಯ ದೇವ ಸೇವಕರೇ ಸೇವೆಯಲ್ಲಿ ಬರುವ ಹೋರಾಟದ ಮೂಲಕ ಸೋತು ಕುಗ್ಗಿ ಹೋಗಿರುವ ಸ್ಥಿತಿಯಲ್ಲಿ ಇದ್ದರೂ ಕರ್ತನ ಕಾರ್ಯವನ್ನು ನಿರೀಕ್ಷಿಸಿರಿ. 'ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು**"** (ಯೆಶಾ. 40:31). ದೇವರ ಹೊಸ ಕಾರ್ಯ, ದರ್ಶನಗಳಿಗಾಗಿ, ಹೊಸ ವಾಗ್ದಾನಕ್ಕಾಗಿ ಈ ಹಳೇ ವರ್ಷದಲ್ಲೇ ನಿಮ್ಮ ಸಭೆಯೊಂದಿಗೆ ಸಿದ್ಧವಾಗಿರಿ. ಹಳೆ ವರ್ಷದ ಸಂಕಟ, ಭಾದೆಗಳನ್ನು ಮರೆತು ಈಗೋ ಕರ್ತನು ನಿಮ್ಮಲ್ಲಿಯೂ, ಸಭೆಯಲ್ಲೂ ಹೊಸ ಕಾರ್ಯವನ್ನು ಮಾಡುವನು. 'ಕಳೆದುಕೊಂಡ ಆಶೀರ್ವಾದವನ್ನು ಆತನು ತಿರುಗಿ ಕಟ್ಟಿಕೊಡುವನು' (ಯೋವೇ. 2:25). 'ನಿಮಗಾದ ಅವಮಾನಕ್ಕೆ ಬದಲಾಗಿ ಎರಡರಷ್ಟು ಮಾನವನ್ನು ಹೊಂದುವಿರಿ, ನಾಚಿಕೆಪಟ್ಟದ್ದಕ್ಕೆ ಪ್ರತಿಯಾಗಿ ಇವರು ತಮ್ಮ ಸ್ವಾಸ್ಥ್ಯದಲ್ಲಿ ಹಿಗ್ಗುವರು' (ಯೆಶಾ. 61:7). ಹೊಸ ನಿರೀಕ್ಷೆಯೊಂದಿಗೆ, ಹೊಸ ತೀರ್ಮಾನದೊಂದಿಗೆ, ಹೊಸ ವರ್ಷವನ್ನು ಪ್ರವೇಶಿಸೋಣ. ಪ್ರಿಯ ದೇವ ಮಗುವೆ ಡಿಸೆಂಬರ್ 31 ನಿನ್ನ ಹಳೇ ಕಾರ್ಯಗಳು, ದೇವರ ಚಿತ್ತವಿಲ್ಲದ ಕಾರ್ಯಗಳಿಗೆ ನಿಜವಾದ ಮಾನಸಾಂತರವಿರುವುದಾದರೆ ನಿಶ್ಚಯವಾಗಿ ಬರುವ 2014ರ ವರ್ಷ ಬಿಡುಗಡೆ, ಜಯದಿಂದ ಕೂಡಿದ ವರ್ಷವಾಗಲಿದೆ. ಆದ್ದರಿಂದ ಈ ದಿನವನ್ನು ವ್ಯರ್ಥಮಾಡಿಕೊಳ್ಳದೆ ದೇವರ ಸನ್ನಿಧಿಯಲ್ಲಿ ಕಾದಿದ್ದು ಹೊಸ ಕಾರ್ಯಕ್ಕಾಗಿ, ಹೊಸ ವಾಗ್ದಾನದೊಂದಿಗೆ, ದರ್ಶನದೊಂದಿಗೆ, ತೀರ್ಮಾನದೊಂದಿಗೆ ಪ್ರವೇಶಿಸು **"**ದೇವರು ನಿನ್ನನ್ನು ಆಶೀರ್ವದಿಸಲಿ. ಈ ವರ್ಷದಲ್ಲಿ ದೇವರು ನಡೆಸಿ, ಬಲಪಡಿಸಿದಕ್ಕಾಗಿ ಕೋಟಿ ಸ್ತೋತ್ರವಾಗಲಿ.

ಮುಂದುವರಿಯುವದು.......

ಕರ್ತನಲ್ಲಿ ನಿಮ್ಮ ಪ್ರೀತಿಯ

**– ಪಾ॥ ರೊನಾಲ್ಡ್ ಮಚಾದೋ**

ಬೇತೇಲ್ ಚರ್ಚ್ ಕಾಮಗೆರೆ.

ಯೆಹೋವನು ತನ್ನನ್ನು ಪ್ರೀತಿಸುವವರೆಲ್ಲರನ್ನು ಕಾಪಾಡುತ್ತಾನೆ

(ಕೀರ್ತ. 146:20).

# ಕ್ರಿಸ್ತನ ಪ್ರಕಾಶವನ್ನು ಹೊಂದಿಕೋ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಕರ್ತನಲ್ಲಿ ಪ್ರಿಯರೇ, ಕೀರ್ತ. 85ನೇ ಅಧ್ಯಾಯ ಮೊದಲ 3 ವಾಕ್ಯ ಧ್ಯಾನಿಸುವಾಗ ದೇವರ ಕರುಣೆಯನ್ನು ಕಾಣುತ್ತೇವೆ. ಮೊಲದನೆಯದಾಗಿ ದೇವರು ದೇಶವನ್ನು ಕರುಣಿಸಿದನು(ಕಟಾಕ್ಷಿಸಿದನು). ಅವರ ಕೂಗಿಗೆ ದೇವರ ಕರುಣೆ ದೊರಕಿತು. ಎರಡನೆಯದಾಗಿ ದೇವರು ಅವರಿಗೆ ಕ್ಷಮಾಪಣೆ ಕೊಟ್ಟನು. ಮೂರನೆಯದಾಗಿ ದೇವರು ಅವರೊಂದಿಗೆ ರಾಜಿಮಾಡಿಕೊಂಡನು. (ಅನ್ಯೋನ್ಯತೆ ಇದೆ) ಒಂದು ಕಾಲದಲ್ಲಿ ದೇವರಿಂದ ಎಲ್ಲಾ ಆಶೀರ್ವಾದವನ್ನು ಸ್ವಾಸ್ಥವಾಗಿ ಹೊಂದಿಕೊಂಡ ಜನರು ಅವರು ಹಳೆಯ ಪಾಪಕ್ಕೆ ಹಿಂದಿರುಗಿದರು. ಅಂದು ಅವರು ಅವಿಧೇಯರಾದರು. ಯೆರೆ. 2:13 ರಲ್ಲಿ **"ನನ್ನ ಜನರು"** ಮೊದಲನೆಯದಾಗಿ ಜೀವದ ಬುಗ್ಗೆಯನ್ನು ತಿರಸ್ಕರಿಸಿ ಬಟ್ಟಿದ್ದಾರೆ. ಎರಡನೆಯದಾಗಿ ಅದಕ್ಕೆ ಬದಲಾಗಿ ಬಿರಿದ ತೊಟ್ಟಿಗಳನ್ನು ಕೊರೆದುಕೊಂಡಿದ್ದಾರೆ. ಅವರು ಯಾವಾಗ ದೇವರನ್ನು ಮರೆತರೋ ಅವರು ಸೆರೆಗೆ ಒಯ್ಯಲ್ಪಟ್ಟರು. ಶತ್ರುವಿನ ನಾನಾ ಬಾಧೆಗಳಿಗೆ ಒಳಪಟ್ಟರು. ಸಂತೋಷ, ಸಮಾಧಾನ, ಆರೋಗ್ಯವನ್ನು ಕಳಕೊಂಡರು. ನಾನಾ ಬಾಧೆಯ ನಿಮಿತ್ತವಾಗಿ ಬಹಳವಾಗಿ ಕುಗ್ಗಿಸಲ್ಪಟ್ಟರೂ ಇಂಥ ಸಂದರ್ಭದಲ್ಲಿ ಸಂಪೂರ್ಣ ರಕ್ಷಣೆಯ ನಿರೀಕ್ಷೆಯೊಂದಿಗೆ ಭಕ್ತನು ತನಗಾಗಿ ಮಾತ್ರವಲ್ಲದೆ ತನ್ನ ಜನರಿಗೋಸ್ಕರ ವಿಜ್ಞಾಪಿಸುತ್ತಿದ್ದಾನೆ. **"ನಿನ್ನ ಪ್ರಜೆಯಾದ ನಾವು ನಿನ್ನಲ್ಲಿ ಆನಂದಿಸುವಂತೆ ನೀನು ನಮ್ಮನ್ನು ಚೈತನ್ಯಪಡಿಸುವದಿಲ್ಲವೋ?"** (ಕೀರ್ತ. 85:6). ದೇವರೆ ಮತ್ತೆ ನಿಮ್ಮ ಬಳಿ ಬರಬೇಕು ನಮ್ಮನ್ನು ಮತ್ತೊಂದಾವರ್ತಿ ಪುನ:ಸ್ಥಾಪಿಸು ನಮಗೆ ಉಜ್ಜೀವನಬೇಕು.

ಈ ಸಂದೇಶ ಓದುತ್ತಿರುವ ಪ್ರಿಯ ಸೇವಕರೇ, ಸೇವೆಯಲ್ಲಿ ಸೋತು ಹೋದ ಅವಸ್ಥೆಯಲ್ಲಿದ್ದಿರೋ ಹಲವು ವರುಷಗಳಿಂದ ಸಭೆಯು ಬೆಳವಣಿಗೆ ಕಾಣಲು ಸಾಧ್ಯವಾಗುತ್ತಿಲ್ಲವೋ? ಪ್ರಿಯ ನಾಯಕರೇ, ವಿಶ್ವಾಸಿಯೇ ಇವತ್ತು ಕ್ರಿಸ್ತನಿಗಾಗಿ ಉರಿದು ಪ್ರಕಾಶಿಸಲಿಕ್ಕೆ ಸಾಧ್ಯವಾಗುತ್ತಿಲ್ಲವೋ? ನೀವು ಎಲ್ಲಿಂದ ಬಿದ್ದಿದ್ದಿರೋ ಅಲ್ಲಿಂದ ತಿರುಗಿಕೊಳ್ಳಿ, ಮೊದಲಿಗಿಂತ ನಿಮ್ಮನ್ನು ಉನ್ನತ ಸ್ಥಿತಿಗೆ ತರುವನು **"ನಿವಾಸಿಗಳು ಬಿಟ್ಟುಬಿಟ್ಟ, ದ್ವೇಷಕ್ಕೀಡಾದ, ಯಾರೂ ಹಾದುಹೋಗದ ನಿನಗೆ ನಾನು ನಿತ್ಯಶ್ರೇಷ್ಠತೆಯನ್ನು ದಯಪಾಲಿಸಿ ನಿನ್ನನ್ನು ತಲತಲಾಂತರ ಗಳವರಿಗೆ ಉಲ್ಲಾಸಕರವಾಗುವಂತೆ ಮಾಡುವೆನು"** (ಯೆಶಾ. 60:15).

ಉಜ್ಜೀವನ ಅಂದರೆ ಹಿಂತಿರುಗಿ ಬರುವ ಅನುಭವ ಅಥವಾ ಜೀವಕ್ಕೆ ಮರಳಿ ಬರುವಂತದು ಅಥವಾ ಉಪಯೋಗಕ್ಕೆ ಬರುವಂತದು ಅದುವೇ ಉಜ್ಜೀವನ.

ಒಬ್ಬರು ಹೀಗೆ ಹೇಳಿದರು ಉಜ್ಜೀವನ ಅನ್ನುವಂತದ್ದು ದೇವರು ಕಾರ್ಯ ಪವೃತ್ತನಾಗಿರುವುದು.

**ಪುನ:ಸ್ಥಾಪನೆ :–** ಸಹಾಯ ಹೊಂದುವಂಥದು ಅಂದರೆ ಸಭೆಯು ಸ್ವಸ್ಥತೆಯನ್ನು ಹೊಂದುವಂತದು. ಆರೋಗ್ಯವಂತ ಸಭೆ ಆತ್ಮಗಳನ್ನು ಗೆಲ್ಲುವಂಥದಾಗಿದೆ. ಒಬ್ಬರ ಹೇಳಿಕೆ – ನನ್ನ ಜೀವನವು ಆತ್ಮವನ್ನು ಕೊಯ್ಯುವುದರ ಮೂಲಕವಾಗಿ ಚಾರ್ಲ್ಸ್ ಫಿನ್ನಿ ಹೇಳುತ್ತಾರೆ, ಪಾಪಿಗಳು ಮಾನಸಾಂತರ ಪಡುವ ಸ್ಥಿತಿಗೆ ಮೊದಲ ಪ್ರೀತಿಗೆ ಹಿಂದಿರುಗುವುದು ಉಜ್ಜೀವನವಾಗಿದೆ. ಇನ್ನೊಬ್ಬರು ಹೀಗೆ ಹೇಳಿದರು– ಅದರ ಅದ್ಭುತಗಳನ್ನು ಎಂದಿಗೂ ಕಳಕೊಳ್ಳಬೇಡಿರಿ. ದೇವರ ಸಾನಿಧ್ಯದಲ್ಲಿ ನೀವು ಪುಳಕಿತರಾಗಿರಬೇಕು. ಎಲ್ಲವು ಪ್ರಾರ್ಥನೆಯಲ್ಲಿ ಪ್ರಾರಂಭವಿದೆ.

ಈ ಸಂದೇಶ ಓದುತ್ತಿರುವ ಪ್ರಿಯರೇ, ನಮ್ಮ ಸುತ್ತಲು ಮುರಿಯಲ್ಪಟ್ಟ ಕುಟುಂಬ ಇದೆ, ಮುರಿಯಲ್ಪಟ್ಟ ಜನರಿದ್ದಾರೆ. ತಮ್ಮ ಜೀವಿತದ ಉದ್ದೇಶವನ್ನು ಕಳಕೊಂಡಿದ್ದಾರೆ. ಇವತ್ತು ಲೋಕದ ಅಮಲಿನಿಂದ ಎಚ್ಚೆತ್ತುಕೊಳ್ಳಿ. ಆತ್ಮೀಕ ನಿದ್ರೆಯಿಂದ ಎಚ್ಚೆತ್ತುಕೊಳ್ಳಿ. ಸತ್ತವರ ಒಡನಾಟ ಬಿಟ್ಟುಬಿಡಿರಿ.

ಡಿ.ಎಲ್. ಮೂಡಿ ಹೇಳಿದರು ದೇವರು ಯಾವುದೇ ಶ್ರೇಷ್ಠ ಕಾರ್ಯಗಳು ಅದು ಮೊಣಕಾಲಿನಿಂದ (ಪ್ರಾರ್ಥನೆ) ಆರಂಭವಾಗುತ್ತದೆ. ಹೌದು ಪ್ರಿಯರೇ, ಮೊಣಕಾಲಿನ ಪ್ರಾರ್ಥನೆ ಶಕ್ತಿಯುತವಾಗಿದೆ. ಅ.ಕೃ. 4:31 ರಲ್ಲಿ ಸಮಸ್ಯೆಗಳು, ಪರಿಸ್ಥಿತಿಗಳು ಎದುರಾಗಿ ಬಂದಾಗ ಮಾನುಷಿಕವಾದ ಭಯ ಎದುರಾದಾಗ ಅವರು ಸಭೆಯಾಗಿ ಒಂದಾಗಿ ಕೂಡಿ ಪ್ರಾರ್ಥಿಸಿದಾಗ ಕೂಡಿದ ಸ್ಥಳವು ನಡುಗಿತು ಅವರೆಲ್ಲರು ಪವಿತ್ರಾತ್ಮಭರಿತರಾದರು, ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು. ಸಿ.ಹೆಚ್. ಸ್ಪರ್ಜನ್ ಹೀಗೆ ಹೇಳಿದರು, ದೇವರು ಯಾವೆಗೆಲ್ಲಾ ಶ್ರೇಷ್ಠಕಾರ್ಯ ಮಾಡಬೇಕೆಂದು ಅಪೇಕ್ಷಿಸುತ್ತಾನೊ ಆತನು ತನ್ನ ಜನರಿಗೆ ಮೊದಲು ಪ್ರಾರ್ಥನೆ ಮಾಡಲು ಹೇಳಿದನು.

ಇವತ್ತು ಪ್ರಾರ್ಥನೆಯಲ್ಲಿ ಸೋತು ಹೋಗುವ ನಿಮಿತ್ತವಾಗಿಯೇ ದೇವರ ಆಶೀರ್ವಾದವನ್ನು ಕಳಕೊಳ್ಳುತ್ತಿರುವುದು. ಒಬ್ಬರು ಹೀಗೆ ಹೇಳಿದರು, **"ದೇವ ಜನರು ಪ್ರಾರ್ಥನೆ ಮಾಡಲು ಪ್ರಾರಂಭಿಸಿದಾಗ ದೇವರ ಕರಗಳು ಚಲಿಸಲು ಪ್ರಾರಂಭವಾಗುತ್ತದೆ"**.

ಯೇಸುವಿನ ಕುರಿತಾಗಿ ನಾವು ನೋಡುವಾಗ ಆತನು ಎಲ್ಲವನ್ನು ದೇವರ ಮುಂದೆ ತಂದನು. ನೀವು ದೇವರ ಸಾನಿಧ್ಯದಲ್ಲಿ ನಾಚಿಕೆಯಿಲ್ಲದ ಭಿಕ್ಷೆಗಾರನಾಗಬಹುದು. ಯಾಕಂದರೆ

ಯೆಹೋವನ ಮಾರ್ಗಗಳೆಲ್ಲಾ ನೀತಿಯುಳ್ಳವುಗಳು; ಆತನು ಎಲ್ಲಾ ಕಾರ್ಯಗಳಲ್ಲಿ ಕೃಪೆತೋರಿಸುವವನು (ಕೀರ್ತ. 145:17).

ನಾವು ಕರ್ತನಾದ ಯೇಸುಕ್ರಿಸ್ತನ ಮಕ್ಕಳಾಗಿದ್ದೇವೆ. ಹಳೆ ಒಡಂಬಡಿಕೆ ಜನರು ಪ್ರಾರ್ಥಿಸುವಾಗ ಅಬ್ರಹಾಮನ ದೇವರೇ, ಇಸಾಕನ ದೇವರೇ, ಯಾಕೋಬನ ದೇವರೇ, ಎಂದು ಪ್ರಾರ್ಥಿಸಿದರೆ ಹೊರತು ಅವರಿಗೆ ತಂದೆಯೆಂದು ಕರೆಯುವ ಭಾಗ್ಯ ಇರಲಿಲ್ಲ. ಇಂದು ಹೊಸ ಒಡಂಬಡಿಕೆ ಭಕ್ತರಾದ ನಾವು ಸಂತೋಷಿಸಬೇಕಾಗಿದೆ. ನಮಗೆಲ್ಲ ಶಾರೀರಿಕ ತಂದೆ ಇದ್ದರೂ ಅದಕ್ಕಿಂತ ಮಿಗಿಲಾಗಿ ನನ್ನ ಮತ್ತು ನಿಮ್ಮ ಕುರಿತಾಗಿ ಯೋಚಿಸುವ ತಂದೆ ಇದ್ದಾರೆ. ಯಾರೆಲ್ಲ ಯೇಸುಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟು ತಂದೆ, ಮಗ, ಪವಿತ್ರಾತ್ಮನಿಂದ ದೀಕ್ಷಾಸ್ನಾನ ತೆಗೆದುಕೊಂಡಿದ್ದಾರೋ ಅವರಿಗೆ ಅಪ್ಪಾ ತಂದೆಯೇ ಎಂದು ಕರೆಯುವ ಮಗನ ಬಾಧ್ಯತೆ ಸಿಕ್ಕಿದೆ. ಹಲ್ಲೆಲ್ಲೂಯ. ಇನ್ನು ಹಳೆ ಒಡಂಬಡಿಕೆ ಭಕ್ತರ ಹಾಗಲ್ಲ ನಮ್ಮ ಪ್ರಾರ್ಥನೆ, ನಾವು ಪರಲೋಕದಲ್ಲಿರುವ ನಮ್ಮ ತಂದೆಯೇ ಎಂದು ಕರೆಯುತ್ತೇವೆ.

ಇಂದು ಸಭೆಯನ್ನು ಪುನರುಜ್ಜೀವನಕ್ಕೆ ನಡೆಸುವಂತ ಉಜ್ಜೀವನಬೇಕು. ಜೀವಕ್ಕೆ ಮರಳಿಬರುವುದು ಅಂದರೆ ಪುನರುತ್ಥಾನದ ಬಲವಾಗಿದೆ. ಉದಾಹರಣೆ ಲಾಜರನ ಕುರಿತಾಗಿ ನೋಡುತ್ತೇವೆ. ಆತ್ಮೀಕ ಪುನರುತ್ಥಾನ ಅದು ಶಾರೀರಿಕ ಪುನರುತ್ಥಾನವಾಗಿದೆ ಸಭೆ ಪುನರುತ್ಥಾನಕ್ಕೆ ಬರಬೇಕಾಗಿದೆ.

ಸಭೆಯು ಭಕ್ತರನ್ನು ಚಲಿಸುವಂತೆ ಮಾಡಬೇಕು. ಅಂದರೆ ಯಾವಾಗಲೂ ಮುಂದಕ್ಕೆ ಹೋಗುವವರನ್ನು ಆ ಉಜ್ಜೀವನ ಅದು ನಮ್ಮಲ್ಲಿ ಹೊಸ ದರ್ಶನ ತರುವಂತದಾಗಿದೆ. ದರ್ಶನವಿಲ್ಲದೆ ಜನರು ಅಂಕೆಮೀರಿ ಹೋಗುತ್ತಾರೆ. ಇದು ಸತ್ಯದ ಸಂಗತಿಯಾಗಿದೆ. ಆದರೆ ಲೋಕ ಗುರುತಿಸುವಂಥ ಉಜ್ಜೀವನಬೇಕಾಗಿದೆ. ಅಪೋಸ್ತಲನಾದ ಪೌಲನು ಹೇಳುತ್ತಾನೆ, ಗಲಾ. 5:7 ರಲ್ಲಿ ನೀವು ಒಳ್ಳೇ ಓಟ ಓಡುತ್ತಿದ್ದೀರಿ. ಆ ಸತ್ಯ ಸಂಗತಿಯಿಂದ ನಿಮ್ಮನ್ನು ತಡೆದು ನಿಲ್ಲಿಸಿದವರಾರು? ಇವತ್ತು ಯಾವ ಉಪದೇಶ ದಾರಿ ತಪ್ಪಿಸುತ್ತಿದೆ ಗಲಾತ್ಯ ಸಭೆಯು ತಿರುಗಿ ಧಾರ್ಮಿಕ ಆಚಾರ ಪದ್ಧತಿಗೆ ಒಳಪಟ್ಟಿತ್ತು, ನಾನಾ ಉಪದೇಶದ ಸೆಳವಿಗೆ ಸಿಕ್ಕಿ ಕಂಗೆಟ್ಟು ಹೋಗಿತ್ತು.

ನಾವು ಆದಿ. 35:1–4 ವಾಕ್ಯವನ್ನು ಧ್ಯಾನಿಸುವಾಗ ಯಾಕೋಬನು ಮತ್ತು ಆತನ ಮನೆಯವರು ತಪ್ಪಾದ ಸಂಗತಿ ಮಾಡುತ್ತಿದ್ದಾಗ ದೇವರು ಯಾಕೋಬನಿಗೆ ಬೇತೇಲ್ ಅನುಭವಕ್ಕೆ ತಿರುಗಿ ಬರುವುದಕ್ಕೆ ಕರೆಕೊಟ್ಟನು. ಯಾಕೋಬನು ಕೂಡಲೇ ನಾವು ಬೇತೇಲಿಗೆ ಹೊರಡೋಣ ನನ್ನ ಪ್ರಯಾಣ ಅಲ್ಲಿಯೇ ಆರಂಭವಾದದು, ನಾನು ಯಜ್ಞವೇದಿ ಕಟ್ಟಿದ ಸ್ಥಳವಾಗಿದೆ. ನನ್ನ ಕಷ್ಟಕಾಲದಲ್ಲಿ ಉತ್ತರಕೊಟ್ಟ ಸ್ಥಳವಾಗಿದೆ. ನಾನು ದರ್ಶನ ಪಡೆದುಕೊಂಡ ಸ್ಥಳ, ದೇವರ ಸ್ವರ ಕೇಳಿದ ಸ್ಥಳ ಅದು ಮಹಿಮೆ ಸ್ಥಳ. ನಾವು ಹಿಂದಿರುಗಿ ಬೇತೇಲ್‌ಗೆ ಹೋಗೋಣ ಅಲ್ಲಿಯೇ ಯಜ್ಞವೇದಿ ದೇವರಿಗೆ ಕಟ್ಟಬೇಕು.

ಬೇತೇಲ್ ಎಂಬುದು ದೇವರ ಮನೆಯಾಗಿದೆ. ದೇವರು ವಾಸಿಸುವ ಸ್ಥಳ, ಮಾತನಾಡುವ ಸ್ಥಳ, ದರ್ಶನ ಹೊಂದಿಕೊಳ್ಳುವ ಸ್ಥಳ, ದೇವದೂತರು ಹತ್ತುತ್ತಾ ಇಳಿದು ಬರುವ ಸ್ಥಳ, ದೇವ ಪ್ರಸನ್ನತೆಯ ಸ್ಥಳ, ಒಂದು ವೇಳೆ ನೀನು ಈ ಬೇತೇಲಿಂದ (ಸಭೆ) ದೂರ ಹೋಗಿರುವುದಾದರೆ ನಿನ್ನ ಮಾರ್ಗದಲ್ಲಿ ನೀನು ನಡೆಯುತ್ತಿರುವುದಾದರೆ ಕರ್ತನಾದ ಯೇಸುಕ್ರಿಸ್ತನು ಇಂದು ಯಾಕೋಬನೊಂದಿಗೆ ಮಾತಾಡಿದ ಹಾಗೆ ನಿನ್ನೊಂದಿಗೆ ಮಾತಾಡುತ್ತಿದ್ದಾನೆ. ಒಳ್ಳೇಯ ತೀರ್ಮಾನದೊಂದಿಗೆ ತಿರುಗಿ ಬೇತೇಲ್ ಅನುಭವಕ್ಕೆ ಹಿಂದಿರುಗಿ ಬಾ. ಯಾಕೋಬನು ತನ್ನ ಕುಟುಂಬ ಸಮೇತವಾಗಿ ಬೇತೇಲ್‌ಗೆ ಬಂದ ಹಾಗೆ ನೀನು ಹಿಂತಿರುಗಿ ಬರುವುದಾದರೆ ನಿಮ್ಮನ್ನು ಅದೇ ಮಹಿಮೆಯಲ್ಲಿ ಕರ್ತನು ನಿಲ್ಲಿಸುವವನಾಗಿದ್ದಾನೆ.

1 ಸಮುವೇಲ 3ನೇ ಅಧ್ಯಾಯದಲ್ಲಿ ಸಮುವೇಲನಿಗೆ ದೀಪವನ್ನು ನೋಡಿಕೊಳ್ಳುವ ಜವಾಬ್ದಾರಿ ಸಿಕ್ಕಿತ್ತು. ಅದು ಆರಿಹೋಗದೆ ನಿತ್ಯವೂ ಉರಿಯುತ್ತಲೆ ಇರಬೇಕಾಗಿತ್ತು. ಯಾಜ. 6:13 ರಲ್ಲಿ ಆ ದೀಪ ಉರಿಯುತ್ತಿರಬೇಕಿತ್ತು. ನಾವು ಪವಿತ್ರಾತ್ಮನನ್ನು ನಂದಿಸಬಾರದು. ಒಂದು ಸಮಯದಲ್ಲಿ ಬೆಂಕಿ ಇತ್ತು. ಈಗ ಅಲ್ಲಿ ಬೂದಿ ಇದೆ. ಪ್ರಿಯರೇ, ಅಲ್ಲೇ ನಿಂತಿರಬೇಡಿ ನಿಮ್ಮ ಜೀವಿತದಲ್ಲಿ ಬೆಂಕಿ ಉರಿಯುತ್ತಲೇ ಇರಬೇಕು.

ಕೀರ್ತನೆಗಾರನು ಎಲ್ಲಾ ಜನರನ್ನು ನೆನೆಸಿಕೊಂಡು ದೇವರೇ ನಿನ್ನ ಜನರನ್ನು ಉಜ್ಜೀವಿಸಮಾಡು. ಅವರು ನಿನ್ನ ನಾಮದಲ್ಲಿ ಉಲ್ಲಾಸಿಸಬೇಕು.

"ಉಜ್ಜೀವನ ಕಣ್ಣೀರಿನಿಂದ ಪ್ರಾರಂಭವಾಗುತ್ತದೆ. ಅದು ಸಂತೋಷದ ಕಡೆಗೆ ಮುಂದುವರಿಯುತ್ತದೆ. ನಿರಂತರವಾಗಿ ಹಿಂದಿನ ಪಾಪಕ್ಕೆ ಆಳುತ್ತಿರುವ ಕ್ರೈಸ್ತನು ದೇವರ ಕೃಪೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅವನ ಜೀವಿತದಲ್ಲಿ ಉಜ್ಜೀವನ ಕಾಣಲು ಸಾಧ್ಯವಿಲ್ಲ.

ದೇವರು ಕ್ಷಮಿಸಿದ್ದಾನೆ ಮತ್ತು ಮರೆತಿದ್ದಾನೆ ಹಾಗೂ ಹೊಸ ಅಧ್ಯಾಯವನ್ನು ನಿಮ್ಮಲ್ಲಿ ಆರಂಭಿಸಿದ್ದಾನೆ. ಹಳೆಯ ಸಂಗತಿಗಾಗಿ ಕೊರಗಿಕೊಳ್ಳಬೇಡಿ. **"ಕರ್ತನ ಸಂತೋಷವೇ ನಮ್ಮ ಬಲವಾಗಿದೆ. ದೇವರು ನಿಮ್ಮ ಜೀವಿತದಲ್ಲಿ ಹೊಸ ಹಾಡು ಕೊಡಲಿ, ಹೊಸ ಬಲ ಕೊಡಲಿ. ಉಜ್ಜೀವನ, ಸಂತೋಷ ಒಟ್ಟಾಗಿ ನಡೆಯುವಂತದು. ಇದು ಗಮನ ಹರಿಸುವ ವ್ಯಕ್ತಿಗಳಿಂದಲೇ ಉಜ್ಜೀವನ ಆರಂಭವಾಗುತ್ತದೆ** (ಯೆಹೆ. 37:3).

ಕರ್ತನು ತಾನೇ ನಿಮ್ಮೆಲ್ಲರನ್ನು ಹೇರಳವಾಗಿ ಆಶೀರ್ವದಿಸಲಿ.

ಮುಂದುವರಿಯುವದು......

ಆತನ ಶ್ವಾಸವು ಆಕಾಶಮಂಡಲವನ್ನು ಶುಭ್ರಮಾಡುವದು

(ಯೋಬ. 26:13).

## ಪ್ರಾರ್ಥನಾ ಮನವಿಗಳು

- ಭಾರತ ದೇಶದಲ್ಲಿ ಕರ್ತನ ನಾಮದ ಮಹಿಮೆಗಾಗಿ ಶ್ರಮಿಸುತ್ತಿರುವ ಪ್ರತಿ0ಯೊಬ್ಬ ದೇವ ಸೇವಕರುಗಳಿಗಾಗಿ, ಪ್ರತಿ0ಯೊಂದು ಸಂಸ್ಥೆಗಳಿಗಾಗಿ ಸಭೆಗಳಿಗಾಗಿ, ಮಾಧ್ಯಮ ಸೇವೆ, ಪತ್ರಿಕೆ ಸೇವೆಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸೋಣ.
- ಕರ್ನಾಟಕದ ಉಜ್ಜೀವನಕ್ಕಾಗಿ 30 ಜಿಲ್ಲೆಗಳ ಹೆಸರುಗಳನ್ನು ಹೇಳಿ ಪ್ರಾರ್ಥಿಸೋಣ. ಸುವಾರ್ತಿಕರನ್ನು ಕರ್ತನು ಎಬ್ಬಿಸುವಂತೆ ಕ್ರಿಸ್ತನ ಪಾದದಲ್ಲಿ ಭಿನ್ನವಿಸೋಣ.
- ಕರ್ತನ ಮಾರ್ಗವನ್ನು ಬಿಟ್ಟು ಪಾಪದಲ್ಲಿ ಜೀವಿಸುತ್ತಾ ಕರ್ತನಿಂದ ಶಾಪವನ್ನು ಬರಮಾಡಿಕೊಳ್ಳುತ್ತಿರುವ ಜನರು ಮನ ತಿರುಗುವಂತೆ ಸುಕ್ಷೇಮವು ನೆಲೆಸುವ ಹಾಗೆ ಕರ್ತನ ಕೃಪೆಯನ್ನು ದೇಶದ ಮೇಲೆ ಕೇಳಿಕೊಳ್ಳೋಣ.
- ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ಆಶೀರ್ವದಿಸಿ ವಿಶಾಲತೆಗೆ ನಡೆಸುವಂತೆ ಪ್ರಾರ್ಥಿಸಿರಿ.
- ಫಿಲಿಫೇನ್ಸ್ ದೇಶದಲ್ಲಿ ಸಂಭವಿಸಿದ ಚಂಡಮಾರುತದಿಂದಾಗಿ ಜನರು ಆಹಾರವಿಲ್ಲದೆ ಹಸಿವೆಯಿಂದ ಬಳಲುತ್ತಿರುವವರಿಗೆ ದೇವರು ಆಹಾರವನ್ನು ಕೊಡುವುದಕ್ಕಾಗಿ ಪ್ರಾರ್ಥಿಸಿರಿ.
- ಜನವರಿ 3ರಿಂದ 13ರ ವರೆಗೆ ನಡೆಯುವ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟಕ್ಕಾಗಿ ಪ್ರಾರ್ಥಿಸಿರಿ.
- ಉಡುಪಿಯಲ್ಲಿ ನಡೆಯುವ ಸಮಾಧಾನ ಮಹೋತ್ಸವಕ್ಕಾಗಿ ಪ್ರಾರ್ಥಿಸಿರಿ ಹಾಗೂ ಪ್ರೋತ್ಸಾಹಿಸಿರಿ.

---


## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**




**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 9902334941**



"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

ನಾನಂತು ನನ್ನ ವಿಮೋಚಕನು ಜೀವಸ್ವರೂಪನೆಂದು ಬಲ್ಲೆನು
(ಯೋಬ. 19:25).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ಸ್ತುತಿಯ ವಸ್ತ್ರ (ಯೆಶಾ. 61:3, 43:21)** :– ನಮ್ಮ ದೇವರು ಸ್ತುತಿಯು ಸಿಂಹಾಸನದಲ್ಲಿ ಆಸೀನನಾಗಿರುವ ದೇವರಾಗಿದ್ದಾನೆಂದು ಕೀರ್ತ. 22:3 ಹೇಳುತ್ತದೆ, ಕರ್ತನ ಪ್ರಸನ್ನತೆಯನ್ನು ನಮ್ಮಲ್ಲಿಗೆ ಬರಮಾಡಲು ಒಂದು ಉತ್ತಮವಾದ ಮಾರ್ಗ ಆತನನ್ನು ಸ್ತುತಿಸಿ ಆರಾಧಿಸುವುದಾಗಿದೆ.

**ಯಾಕೆ ನಾವು ಕರ್ತನನ್ನು ಸ್ತುತಿಸಬೇಕು** :– 1) ದೇವರ ಉಪಕಾರ ಸ್ಮರಿಸಲು ನಾವು ಸ್ತುತಿಸಬೇಕು. **“ನನ್ನ ಮನವೇ ಯೆಹೋವನನ್ನು ಕೊಂಡಾಡು ನನ್ನ ಸರ್ವೇಂದ್ರಿಯಗಳೇ ಆತನ ಪವಿತ್ರ ನಾಮವನ್ನು ಕೀರ್ತಿಸಿರಿ. ನನ್ನ ಮನವೇ ಯೆಹೋವನನ್ನು ಕೊಂಡಾಡು ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ** (ಕೀರ್ತ. 103:1–2).

ಪ್ರತಿದಿನ ನಮ್ಮ ಪ್ರಾಣವನ್ನು ಎಲ್ಲಾ ಗಂಡಾಂತರಗಳಿಂದ ತಪ್ಪಿಸುತ್ತಾನೆ, ನಮಗೆ ರಕ್ಷಣೆಕೊಟ್ಟು ನಿತ್ಯಜೀವದ ನಿರೀಕ್ಷೆಯನ್ನು ನಮ್ಮಲ್ಲಿ ಉಂಟು ಮಾಡಿದ್ದಾನೆ. ಎಲ್ಲಾ ಕೊರತೆಗಳನ್ನು ನೀಗಿಸಿ ಪ್ರತಿದಿನ ಅದ್ಭುತವಾಗಿ ನಡೆಸುತ್ತಾನೆ. ಆತನ ಉಪಕಾರಗಳನ್ನು ಮರೆಯದೇ ಆತನನ್ನು ನಾವು ಸ್ತುತಿಸಬೇಕು. **“ಆತನ ರಾಜ್ಯದ ಸರ್ವ ಸ್ಥಳಗಳಲ್ಲಿರುವ ಎಲ್ಲಾ ಸೃಷ್ಟಿಗಳೇ ಯೆಹೋವನನ್ನು ಕೊಂಡಾಡಿರಿ. ನನ್ನ ಮನವೇ ಯೆಹೋವನನ್ನು ಕೊಂಡಾಡು”** (ಕೀರ್ತ. 103:22).

1) **ಶತ್ರುಗಳ ಮುಂದೆ ಬೀಳಲು ಬಿಡದೆ ಉದ್ಧರಿಸಿದ್ದಕ್ಕಾಗಿ ಆತನನ್ನು ಸ್ತುತಿಸಬೇಕು:– “ಯೆಹೋವನೇ ನನ್ನ ಶತ್ರುಗಳು ಸಂತೋಷಿಸುವುದಕ್ಕೆ ಅವಕಾಶಕೊಡದೆ ನನ್ನನ್ನು ಉದ್ಧರಿಸಿದ್ದರಿಂದ ನಿನ್ನನ್ನು ಕೊಂಡಾಡುವೆನು”** (ಕೀರ್ತ. 30:1–2). ನಮ್ಮ ಜೀವಿತದ ಮೇಲುಗಳನ್ನು ಕಾಣುವಾಗ ಅನೇಕರು ಹೊಟ್ಟೆಕಿಚ್ಚುಪಟ್ಟು ನಮಗೆ ವಿರುದ್ಧವಾಗಿ ಕಾರ್ಯಗಳನ್ನು ಮಾಡುತ್ತಾರೆ. ನಮಗೆ ಕಷ್ಟಗಳು ಬರುವಾಗ ಅವರು ಸಂತೋಷಿಸುತ್ತಾರೆ ಮಾತ್ರವಲ್ಲದೆ ನಮ್ಮ ಬೀಳ್ವಿಕೆಯನ್ನು ಅವರು ಎದುರು ನೋಡುತ್ತಾರೆ. ಆದರೆ ಅವರು ನಿರೀಕ್ಷಿಸಿದಂತೆ ನಮ್ಮನ್ನು ಬೀಳಲು ಹಾಗೂ ನಾಶವಾಗಲು ಕರ್ತನು ಬಿಡದೇ ಅವರ ಮುಂದೆಯೇ ನಮ್ಮನ್ನು ಮೇಲಕ್ಕೆ ತರುತ್ತಾನೆ. ದಾವೀದನು ನೀನು ಧರ್ಮವನ್ನು ಪ್ರೀತಿಸಿದಿ ಅಧರ್ಮವನ್ನು ದ್ವೇಷಿಸಿದಿ ಆದುದರಿಂದ ದೇವರು ನಿನ್ನ ದೇವರೇ ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತ ಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ. ಮತ್ತೊಂದು ಕಡೆ **“ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೀ ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ”** (ಕೀರ್ತ. 23:5).

2) **ಕರ್ತನು ದೊಡ್ಡ ದೇವರಾಗಿರುವುದರಿಂದ ಆತನನ್ನು ಸ್ತುತಿಸಬೇಕು :– “ಯೆಹೋವನು ದೊಡ್ಡವನೂ ಬಹಳವಾಗಿ ಸ್ತುತ್ಯನೂ ಆಗಿದ್ದಾನೆ. ಎಲ್ಲಾ ದೇವರುಗಳಲ್ಲಿ ಆತನೇ ಭಯಂಕರನು”** (ಕೀರ್ತ. 96:4). ನಮ್ಮ ದೇವರು ಎಷ್ಟು ದೊಡ್ಡವನೆಂದರೆ ಭೂಮಿಯು ಆತನಿಗೆ ಪಾದಪೀಠ ಆಕಾಶವು ಆತನಿಗೆ ಸಿಂಹಾಸನ **“ಯಾವನು ಸಾಗರ ಸಮುದ್ರಗಳನ್ನು ಸೇರೆಯಿಂದ ಅಳತೆ ಮಾಡಿದನು? ಯಾವನು ಆಕಾಶಮಂಡಲದ ಪರಿಮಾಣವನ್ನು ಗೇಣಿನಿಂದ ನಿರ್ಣಯಿಸಿದನು? ಭೂಲೋಕದ ಮಣ್ಣನ್ನೆಲ್ಲಾ ಕೊಳಗಕ್ಕೆ ತುಂಬಿದವನು ಯಾರು? ಬೆಟ್ಟಗಳನ್ನು ತ್ರಾಸಿನಿಂದಲೂ ಗುಡ್ಡಗಳನ್ನು ತಕ್ಕಡಿಯಿಂದಲೂ ತೂಗಿದವನು ಯಾರು?”** (ಯೆಶಾ. 40:12). ನಮ್ಮ ದೇವರು ಎಲ್ಲಾಕ್ಕಿಂತಲೂ ದೊಡ್ಡವನೂ ಆತನು ಘನಮಾನ ಮಹಿಮೆಗೆ ಯೋಗ್ಯನು ಆದಕಾರಣ ಆತನನ್ನು ನಾವು ಸ್ತುತಿಸಬೇಕು.

3) **ನಮ್ಮ ಗೋಳಾಟ ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದ್ದಕ್ಕಾಗಿ ಆತನನ್ನು ಸ್ತುತಿಸಬೇಕು: “ಆಗ ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದಿ. ನಾನು ಕಟ್ಟಿಕೊಂಡಿದ್ದ ಗೋಣಿತಟ್ಟನ್ನು ತೆಗೆದುಬಿಟ್ಟು ಹರ್ಷವಸ್ತ್ರವನ್ನು ನನಗೆ ಧಾರಣೆಮಾಡಿಸಿದಿ. ಇದರಿಂದ ಯೆಹೋವನೇ ನನ್ನ ಮನಸ್ಸು ಎಡಬಿಡದೆ ನಿನ್ನನ್ನು ಕೀರ್ತಿಸುತ್ತಿರುವದು. ನನ್ನ ದೇವರೇ ನಿನ್ನನ್ನು ಸದಾಕಾಲಕ್ಕೂ ಸ್ತುತಿಸುವೆನು** (ಕೀರ್ತ. 30:11–12). ಯೋಹಾ. 11:1 ರಿಂದ ಲಾಜರನ ಮನೆಯಲ್ಲಿ ದು:ಖ ಗೋಳಾಟ ತುಂಬಿತ್ತು. ಯಾಕೆಂದರೆ ಲಾಜರನ ಸತ್ತು ಹೋಗಿದ್ದ ಕರ್ತನು ಅಲ್ಲಿಗೆ ಹೋಗಿ ಸತ್ತು ಕೊಳೆತು 4 ದಿನಗಳಾಗಿದ್ದ ಲಾಜರನ ಶರೀರವನ್ನು ಜೀವದಿಂದ ಎಬ್ಬಿಸುವುದರ ಮೂಲಕ ಅವರ ಮನೆಯಲ್ಲಿ

ಜ್ಞಾನವು ನಿನ್ನ ಹೃದಯದೊಳಗೆ ಪ್ರವೇಶಿಸುವದು, ತಿಳುವಳಿಕೆಯು ನಿನ್ನ ಆತ್ಮಕ್ಕೆ ಅಂದವಾಗಿರುವದು (ಜ್ಞಾನೋ. 2:10).

ಸಂತೋಷವನ್ನು ಉಂಟು ಮಾಡಿದ. ಅನೇಕ ಕಷ್ಟ ನಷ್ಟಗಳಲ್ಲಿ ನಾವು ಕರ್ತನಿಗೆ ಮೊರೆ ಇಡುವಾಗ ಕರ್ತನು ಕೇಳಿ ಬಿಡುಗಡೆ ಮಾಡಿ ನಮ್ಮ ಕಣ್ಣೀರನ್ನು ನಿಲ್ಲಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡುತ್ತಾನೆ.

4) ಕರ್ತನನ್ನು ಗೌರವಿಸುವ ಸಲುವಾಗಿ ಆತನನ್ನು ಸ್ತುತಿಸಬೇಕು "ಯಾರು ಸ್ತುತಿ ಯಜ್ಞವನ್ನು ಸಮರ್ಪಿಸುತ್ತಾರೋ ಅವರೇ ನನ್ನನ್ನು ಗೌರವಿಸುವವರು. ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳುವವರಿಗೆ ನನ್ನ ವಿಶೇಷವಾದ ರಕ್ಷಣೆಯನ್ನು ತೋರಿಸುವೆನು. ಅನೇಕರು ರಾಜಕಾರಣಿಗಳನ್ನು, ಅಧಿಕಾರಿಗಳನ್ನು ಹೊಗಳುತ್ತಾರೆ. ಕರ್ತನನ್ನು ಗೌರವಿಸುವ ಸಲುವಾಗಿ ನಾವು ಯಾವಾಗಲೂ ಆತನನ್ನು ಸ್ತುತಿಸಬೇಕು. "ನಾನು ಯೆಹೋವನನ್ನು ಎಡೆಬಿಡದೆ ಕೊಂಡಾಡುವೆನು ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿ ಇರುವುದು" (ಕೀರ್ತ. 34:1).

5) ಆತನು ಆದಿ ಸಂಕಲ್ಪಗಳನ್ನು ನೆರವೇರಿಸಿ ಅದ್ಭುತಗಳನ್ನು ಮಾಡಿದ ಕಾರಣ ಆತನನ್ನು ಸ್ತುತಿಸಬೇಕು :– "ಯೆಹೋವನೇ ನೀನೇ ನನ್ನ ದೇವರು ನೀನು ಸತ್ಯ ಪ್ರಮಾಣಿಕತೆಗಳನ್ನು ಅನುಸರಿಸಿ ಆದಿ ಸಂಕಲ್ಪಗಳನ್ನು ನೆರವೇರಿಸುತ್ತಾ ಅದ್ಭುತಗಳನ್ನು ನಡೆಸಿದ ಕಾರಣ ನಿನ್ನನ್ನು ಕೊಂಡಾಡುವೆನು. ನಿನ್ನ ನಾಮವನ್ನು ಮಹಿಮೆಗೊಳಿಸುವೆನು (ಕೀರ್ತ. 150:2).

6) ಆತನು ಸ್ತುತಿ ಪಾತ್ರನಾಗಿರುವ ಕಾರಣ ಸ್ತುತಿಸಬೇಕು : "ಯೆಹೋವನು ಮಹೋನ್ನತನು ನಮ್ಮ ದೇವರು ತನ್ನ ಪರಿಶುದ್ಧ ಪರ್ವತನಗರದಲ್ಲಿ ಸರ್ವ ಸ್ತುತಿ ಪಾತ್ರನಾಗಿದ್ದಾನೆ" (ಕೀರ್ತ. 48:1).

7) ಆತನ ಕೃಪೆಗಾಗಿ ಆತನನ್ನು ಸ್ತುತಿಸಬೇಕು : "ಅವರು ಯೆಹೋವನ ಕೃಪೆಗೋಸ್ಕರವೂ ಆತನು ಮಾನವರಿಗಾಗಿಯೂ ನಡಿಸಿದ ಅದ್ಭುತಗಳಿಗೋಸ್ಕರವೂ ಆತನನ್ನು ಕೊಂಡಾಡಲಿ" (ಕೀರ್ತ. 107:21).

ಮುಂದುವರಿಯುವದು.........

ಪಾ॥ ಸುನಿಲ್ ಜಾನ್ ಡಿ'ಸೋಜಾ.


## ದೇವರ ಸ್ವರ ಮಾಸಪತ್ರಿಕೆಯ ಪರಿಷ್ಕರಿಸಲ್ಪಟ್ಟ ಜಾಹೀರಾತಿನ ದರಗಳು

| | | |
|---|---|---|
| Back Page Colour (Full) | : | 5,000/- |
| Front Inner Page Colour (Full) | : | 3,500/- |
| Back Inner Page Colour (Full) | : | 2,500/- |
| Inside B/W (Full Page) | : | 800/- |

**ಆಶ್ರಮದ ಅವಶ್ಯಕತೆಗಳು**

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ
5. 50 ಮಂಚ
6. 50 ಹಾಸಿಗೆ
7. 50 ದಿಂಬು
8. 50 ಬೆಡ್ ಶೀಟ್
9. 50 ಹೊದಿಕೆ

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**


ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ (ಜ್ಞಾನೋ. 5:18).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

# ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

6) **ದೇವರು ಪ್ರತಿಫಲ ಕೊಡುವಾತನು :–** ಆದುದರಿಂದ ನನ್ನ ಪ್ರಿಯ ಸಹೋದರರೇ, ಸ್ಥಿರ ಚಿತ್ತರಾಗಿಯೂ ನಿಶ್ಚಲರಾಗಿಯೂ ಇರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವುದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ (2 ಕೊರಿ. 15:58).

ಇಗೋ ಬೇಗ ಬರುತ್ತೇನೆ ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿದೆ (ಪ್ರಕ. 22:12). ಇವತ್ತು ನೀವು ಮಾಡುವ ಕರ್ತನ ಸೇವೆ, ಆರಾಧನೆ, ಆತನಿಗಾಗಿರುವ ಪ್ರತಿಷ್ಠೆ, ಆತನಿಗಾಗಿರುವ ವೈರಾಗ್ಯ, ಆತನಿಗಾಗಿ ಸಹಿಸುವ ಹಿಂಸೆ ಎಲ್ಲಕ್ಕೂ ಆತನು ಪ್ರತಿಫಲ ಕೊಡುವಾತನಾಗಿದ್ದಾನೆ (ಮಾರ್ಕ. 10:29–31).

7) **ದೇವರು ಪಕ್ಷಪಾತಿಯಲ್ಲ :–** (ರೋಮ. 2:11). ದೇವರಲ್ಲಿ ಪಕ್ಷಪಾತವಿಲ್ಲ (ಅ.ಕೃ. 10:34–35, ಧರ್ಮೋ. 10:17). ಎಲ್ಲಾ ಮನುಷ್ಯರನ್ನು ಒಂದೇ ರೀತಿಯಾಗಿ ನೋಡುತ್ತಾನೆ. ಆತನ ದೃಷ್ಟಿಯಲ್ಲಿ ಐಶ್ವರ್ಯವಂತರೂ, ಗಣ್ಯರು, ಬಡವರೂ ಎಲ್ಲಾ ಒಂದೇ.

8) **ದೇವರು ಕ್ಷಮಿಸುತ್ತಾನೆ:–** (ಮತ್ತಾ. 6:14). ಆತನು ನಮ್ಮ ಪಾಪಗಳಿಗೆ ಸರಿಯಾಗಿ ನಮ್ಮನ್ನು ಶಿಕ್ಷಿಸಲಿಲ್ಲ. ನಮ್ಮ ಅಪರಾಧಗಳಿಗೆ ತಕ್ಕಂತೆ ದಂಡಿಸಲಿಲ್ಲ (ಕೀರ್ತ. 103:10).

ನೀನು ಎಷ್ಟೇ ದೊಡ್ಡ ಪಾಪಿಯಾದರೂ, ಕೊಲೆಗಾರನಾದರೂ, ವ್ಯಭಿಚಾರಿಯಾದರೂ, ಕಳ್ಳನಾದರೂ, ದರೋಡೆಕೋರನಾದರೂ ಒಂದು ಸಲ ಕರ್ತನಾದ ಯೇಸುಕ್ರಿಸ್ತನ ಬಳಿಗೆ ಬಂದರೆ ಆತನು ನಿನ್ನ ಪಾಪಗಳನ್ನು ಕ್ಷಮಿಸಿ ನಿನ್ನ ಮನಸ್ಸಾಕ್ಷಿಯನ್ನು ಶುದ್ಧೀಕರಿಸಿ ಪಾಪದ ಜೀವಿತದಿಂದ ಬಿಡಿಸಿ ನೂತನ ಜೀವಿತಕ್ಕೆ ನಡೆಸುವನು.

9) **ದೇವರು ಕನಿಕರವುಳ್ಳವನು** (ಮತ್ತಾ. 14:14). ಆತನು ಹೊರಗೆ ಬಂದು ಬಹು ಜನರ ಗುಂಪನ್ನು ಕಂಡು ಕನಿಕರಪಟ್ಟು ಅವರಲ್ಲಿದ್ದ ರೋಗಿಗಳನ್ನು ಸ್ವಸ್ಥಮಾಡಿದನು (ಕೀರ್ತ. 145:8, 103:8, 86:15, ಯೋವೇ. 2:13, ನೆಹೆ. 9:17, 2 ಪೂರ್ವ. 30:9, ವಿಮೋ. 34:6). ನನ್ನ ಮೇಲೆ ಕರುಣೆ ತೋರಿಸುವವರು ಯಾರು? ನನ್ನ ಅತ್ತೆಗೆ ನನ್ನ ಮೇಲೆ ಕನಿಕರ ಇಲ್ಲ, ನನ್ನ ಸೊಸೆಗೆ ನನ್ನ ಮೇಲೆ ಕನಿಕರ ಇಲ್ಲ, ನನ್ನ ಮಾಲೀಕರಿಗೆ ನನ್ನ ಮೇಲೆ ಕನಿಕರವಿಲ್ಲ, ನನ್ನ ಮಕ್ಕಳಿಗೆ ನನ್ನ ಮೇಲೆ ಕನಿಕರ ಇಲ್ಲ ಎಂದು ಅಳಬೇಡಿ. ನಿಮ್ಮ ಮೇಲೆ ಕನಿಕರ ತೋರಿಸುವ ಒಬ್ಬ ದೇವರಿದ್ದಾನೆ ಆತನು ಎಲ್ಲಾ ಜನರು ನಿಮ್ಮ ಮೇಲೆ ಕನಿಕರ ತೋರಿಸುವ ಹಾಗೆ ನಿಮ್ಮ ಪರಿಸ್ಥಿತಿಯನ್ನು ಬದಲಾಯಿಸಲು ಶಕ್ತನಾಗಿದ್ದಾನೆ. ರಾಜನ ಸಂಕಲ್ಪಗಳು ಯೆಹೋವನ ಕೈಯಲ್ಲಿ ನೀರಿನ ಕಾಲುವೆಗಳಂತೆ ಇವೆ. ತನಗೆ ಬೇಕಾದ ಕಡೆಗೆ ತಿರುಗಿಸುತ್ತಾನೆ (ಜ್ಞಾನೋ. 21:1).

10) **ಆತನು ಕಟಾಕ್ಷಿಸುತ್ತಾನೆ** (ಆಶೀರ್ವದಿಸುತ್ತಾನೆ) ಯೆಹೋವನು ನೀತಿವಂತರನ್ನು ಕಟಾಕ್ಷಿಸುತ್ತಾನೆ ಅವರು ಮೊರೆಯಿಡುವಾಗ ಕಿವಿಗೊಡುತ್ತಾನೆ (ಕೀರ್ತ. 34:15).

11) **ದೇವರು ಒಬ್ಬನೇ (ಧರ್ಮೋ. 6:4) :–** ಇಸ್ರಾಯೇಲರೇ ಕೇಳಿರಿ ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು. ಒಬ್ಬನೇ ದೇವರು 3 (ಮೂರು) ವ್ಯಕ್ತಿತ್ವಗಳಲ್ಲಿ ತನ್ನನ್ನು ಪ್ರಕಟಿಸಿಕೊಂಡಿದ್ದಾನೆ. ತಂದೆ, ಮಗ, ಪರಿಶುದ್ಧಾತ್ಮ.

1. ತಂದೆಯಾದ ದೇವರಿಗೆ ಒಂದು ವ್ಯಕ್ತಿತ್ವವಿದೆ
2. ಮಗನಾದ ಯೇಸುಕ್ರಿಸ್ತನಿಗೆ ಒಂದು ವ್ಯಕ್ತಿತ್ವವಿದೆ
3. ಪರಿಶುದ್ಧಾತ್ಮನಿಗೆ ಒಂದು ವ್ಯಕ್ತಿತ್ವವಿದೆ.

ನಮ್ಮ ದೇವರು ತ್ರೈಯೇಕ ದೇವರಾಗಿದ್ದಾನೆ (ಮತ್ತಾ. 28:18–20).

ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ದೇವರ ಪ್ರೀತಿಯು ಪವಿತ್ರಾತ್ಮನ ಅನ್ಯೋನ್ಯತೆಯು ನಿಮ್ಮೆಲ್ಲರ ಸಂಗಡವಿರಲಿ (2 ಕೊರಿ. 13:14).

12) **ದೇವರು ವ್ಯಕ್ತಿತ್ವವುಳ್ಳವನಾಗಿದ್ದಾನೆ** (ಯೆಶಾ. 41:4). ಇದನ್ನೆಲ್ಲಾ ನಡೆಯಿಸಿ ನೆರವೇರಿಸಿದವನು ಯಾರು ಆದಿಯಿಂದ ಈಗಿನವರೆಗೂ ತಲಾತಲಾಂತರಗಳನ್ನು ಬರಮಾಡುವವನಾದ ಯೆಹೋವನೆಂಬ ನಾನೇ ಹೌದು ಆದಿಪುರುಷನು ಅಂತ್ಯಕಾಲದವರ ಸಂಗಡಿಗನೂ ಆಗಿರುವ ನಾನೊಬ್ಬನೇ.

**ದೇವರಿಗೆ ಜೀವವಿದೆ ದೇವರಿಗೆ ವ್ಯಕ್ತಿತ್ವವಿದೆ :–** ನನ್ನ ವಿಮೋಚಕನು ಜೀವಸ್ವರೂಪನೆಂದು ಬಲ್ಲೆನು (ಯೋಬ. 19:25).

1) ದೇವರು ಕಟಾಕ್ಷಿಸುತ್ತಾನೆ (ಕೀರ್ತ. 34:15).
2) ದೇವರು ನಗುತ್ತಾನೆ (ಕೀರ್ತ. 2:4).
3) ದೇವರು ಕೋಪಗೊಳ್ಳುತ್ತಾನೆ (ಕೀರ್ತ. 106:40).
4) ದೇವರು ಯೋಚಿಸುತ್ತಾನೆ (ಯೆರೆ. 29:11).

ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ, ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು (ಜ್ಞಾನೋ. 8:17).

5) ದೇವರು ಕೇಳುತ್ತಾನೆ (ಕೀರ್ತ. 65:2).
6) ದೇವರು ಶಿಕ್ಷಿಸುತ್ತಾನೆ (ಇಬ್ರಿ. 12:5–6).
7) ದೇವರು ಉಪದೇಶಿಸುತ್ತಾನೆ (ಯೋಬ. 36:22).
8) ದೇವರು ಮಾತನಾಡುತ್ತಾನೆ (ಆದಿ. 1:3).
9) ದೇವರು ತೀರ್ಮಾನಿಸುತ್ತಾನೆ (ಆದಿ. 1:26).
10) ದೇವರು ನೋಡುತ್ತಾನೆ (ಆದಿ. 1:31).
11) ದೇವರು ವಿಶ್ರಮಿಸುತ್ತಾನೆ (ಆದಿ. 2:2).
12) ದೇವರು ಆಶೀರ್ವದಿಸುತ್ತಾನೆ (ಆದಿ. 2:3).
13) ದೇವರು ಸಂಚರಿಸುತ್ತಾನೆ (ಆದಿ. 3:8).
14) ದೇವರು ದು:ಖಿಸುತ್ತಾನೆ (ಹೋಶೆ. 11:8).
15) ದೇವರು ಪ್ರೀತಿಸುತ್ತಾನೆ (ಯೆರೆ. 31:3).
16) ದೇವರು ಚಿಂತಿಸುತ್ತಾನೆ (1 ಪೇತ್ರ. 5:7).
17) ದೇವರು ಆಲೋಚನೆ ಕೊಡುತ್ತಾನೆ (ಕೀರ್ತ. 32:8).
18) ದೇವರು ಅವಶ್ಯಕತೆಗಳನ್ನು ಪೂರೈಸುತ್ತಾನೆ (ಫಿಲಿ. 4:19).
19) ದೇವರು ಬಿಡಿಸುತ್ತಾನೆ (ಕೀರ್ತ. 50:15).
20) ದೇವರು ಅನುದಿನವೂ ನಮ್ಮ ಭಾರವನ್ನು ಹೊರುತ್ತಾನೆ (ಕೀರ್ತ. 68:19).

ದೇವರ ಜೀವಿಸುವ ಹಾಗೂ ಆತನ ವ್ಯಕ್ತಿತ್ವವನ್ನು ಸೂಚಿಸುವ ಇನ್ನೂ ಅನೇಕ ವಾಕ್ಯಗಳನ್ನು ಕೊಡಬಹುದು. ಆದರೆ ಈ ಎಲ್ಲಾ ವಾಕ್ಯಗಳ ಮೂಲಕವಾಗಿ ನಾವು ದೇವರು ಜೀವಿಸುತ್ತಾನೆ ಮತ್ತು ಆತನು ವ್ಯಕ್ತಿತ್ವವುಳ್ಳವನು ಎಂದು ತಿಳಿದುಕೊಳ್ಳಬಹುದು. ದೇವರನ್ನು ಒಂದು ಮೃಗಕ್ಕೆ, ಪಕ್ಷಿಗೆ ಅಥವಾ ಮನುಷ್ಯ, ಕಲ್ಲು ಬಂಡೆ, ಸೂರ್ಯ, ಚಂದ್ರ ನಕ್ಷತ್ರಗಳಿಗೆ ನಾವು ಹೋಲಿಸಬಾರದು. ಇವೆಲ್ಲಾ ದೇವರ ಸೃಷ್ಟಿಯಾಗಿದೆ. ಸೃಷ್ಟಿ ಕರ್ತನು ಮಾತ್ರ ಆರಾಧನೆಗೆ, ಸ್ತುತಿಗೆ, ಸ್ತೋತ್ರಕ್ಕೆ, ಮಹಿಮೆಗೆ ಯೋಗ್ಯನಾಗಿದ್ದಾನೆ.

ಇಸ್ರಾಯೇಲ್ ಜನರು ಅತೀ ಬೇಗನೆ ತಮ್ಮನ್ನು ಐಗುಪ್ತದ ದಾಸತ್ವದಿಂದ ಬಿಡಿಸಿ, ಪೋಷಿಸಿ, ನಡೆಸಿದ ದೇವರನ್ನು ಮರೆತು, ಮನುಷ್ಯನ ಕೈಗಳಿಂದ ಮಾಡಿದ ವಿಗ್ರಹಗಳನ್ನು ಆರಾಧಿಸಿ, ದೇವದ್ರೋಹಿಗಳಾಗಿ ಮಾರ್ಪಟ್ಟರು. ಇದು ಇಸ್ರಾಯೇಲರ ಹಿಂಜಾರುವಿಕೆಗೆ ಕಾರಣವಾಯಿತು.

ಸೂರ್ಯ, ಚಂದ್ರ, ನಕ್ಷತ್ರ, ಮರ, ಗಿಡ, ಕಲ್ಲು, ಪ್ರಾಣಿ, ಪಕ್ಷಿ ಇವೆಲ್ಲವನ್ನು ದೇವರು ನಮಗಾಗಿ ಕೊಟ್ಟಿದ್ದಾನೆ. ದೇವರು ತನ್ನ ಸೃಷ್ಟಿ ಕಾರ್ಯದಲ್ಲಿ ಮೊದಲ 5 (ಐದು ದಿನದಲ್ಲಿ) ಸೃಷ್ಟಿಕಾರ್ಯದ ಕೆಲಸ ಮಾಡಿ ಆರನೇ ದಿನದಲ್ಲಿ ಮನುಷ್ಯನನ್ನು ಸೃಷ್ಟಿ ಮಾಡಿದನು (ಆದಿ. 1:26–31). ದೇವರು ಎಲ್ಲವನ್ನು ಮನುಷ್ಯನಿಗಾಗಿ ಸೃಷ್ಟಿಸಿ ಎಲ್ಲವನ್ನು ಮನುಷ್ಯನಿಗೆ ಅಧೀನ ಮಾಡಿದನು. ಆದಿ. 1:28 ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ. ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು. ಮನುಷ್ಯನು ಇವತ್ತು ಸೃಷ್ಟಿಯನ್ನು ದೊರೆತನ ಮಾಡುವುದನ್ನು ಬಿಟ್ಟು ಸೃಷ್ಟಿಯನ್ನು ಆರಾಧಿಸುತ್ತಿದ್ದಾನೆ. ಮನುಷ್ಯನು ತನ್ನನ್ನು ಸೃಷ್ಟಿಸಿದ ಸೃಷ್ಟಿಕರ್ತನನ್ನು ಮರೆತುಬಿಟ್ಟಿದ್ದಾನೆ. ಧರ್ಮೋ. 32:15 ಆದರೆ ಯೆಶೂರನು ಚೆನ್ನಾಗಿ ತಿಂದು ಕೊಟ್ಟ ಅಗಡಾಗಿ ತನ್ನನ್ನು ಸೃಷ್ಟಿಸಿದ ದೇವರನ್ನು ಬಿಟ್ಟು ತನ್ನ ಆಶ್ರಯದುರ್ಗವನ್ನು ತಿರಸ್ಕರಿಸಿತು. ಇಸ್ರಾಯೇಲರೇ ನಿಮ್ಮನ್ನು ಹುಟ್ಟಿಸಿದ ತಂದೆಯಂತಿರುವ ಶರಣನನ್ನು ನೀವು ನೆನಸಲಿಲ್ಲ, ಹೆತ್ತ ತಾಯಿಯಂತಿರುವ ದೇವರನ್ನು ನೀವು ಮರೆತು ಬಿಟ್ಟಿರಿ (ಧರ್ಮೋ. 32:18). ಹೋರೇಬಿನಲ್ಲಿ ಯೆಹೋವನು ಬೆಂಕಿಯ ಜ್ವಾಲೆಯೊಳಗಿಂದ ನಮ್ಮ ಸಂಗಡ ಮಾತಾನಾಡಿದಾಗ ನಿಮಗೆ ಯಾವ ಆಕಾಶವು ಕಾಣಿಸಲಿಲ್ಲವಷ್ಟೇ. ಆದುದರಿಂದ ನೀವು ನಿಮ್ಮ ನಿಮ್ಮ ಮನಸ್ಸುಗಳನ್ನು ಬಹು ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು. ನೀವು ಸ್ತ್ರೀ ಪುರುಷರ ರೂಪವನ್ನಾಗಲಿ ಭೂಮಿಯ ಮೇಲೆ ಸಂಚರಿಸುವ ಮೃಗದ ರೂಪವನ್ನಾಗಲಿ ಆಕಾಶದಲ್ಲಿ ಹಾರಾಡುವ ಪಕ್ಷಿಯ ರೂಪವನ್ನಾಗಲಿ ಭೂಮಿಯ ಕೆಳಗಣ ನೀರಿನಲ್ಲಿರುವ ಮೀನಿನ ರೂಪವನ್ನಾಗಲಿ ದೇವರ ಸ್ವರೂಪವೆಂದು ಮಾಡಿಕೊಂಡು ಭ್ರಷ್ಟರಾಗಬಾರದು. ನಿಮ್ಮ ದೇವರಾದ ಯೆಹೋವನು ಭೂಲೋಕದಲ್ಲಿರುವ ಬೇರೆ ಎಲ್ಲಾ ಜನಾಂಗಳಿಗೋಸ್ಕರ ದಯಪಾಲಿಸಿದ ಸೂರ್ಯ, ಚಂದ್ರ, ನಕ್ಷತ್ರಗಳೆನಿಸಿಕೊಳ್ಳುವ ಆಕಾಶ ಸೈನ್ಯವನ್ನು ನೀವು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವಾಗ ಮರುಳುಗೊಂಡು ಅವುಗಳನ್ನು ಪೂಜಿಸಲೂ ಬಾರದು, ನಮಸ್ಕರಿಸಲೂ ಬಾರದು. ನಿಮ್ಮನ್ನಾದರೋ ಯೆಹೋವನು ತನಗೆ ಸ್ವಕೀಯ ಜನರನ್ನಾಗಿ ಮಾಡಿಕೊಳ್ಳಬೇಕೆಂದು ಸಂಕಲ್ಪಿಸಿ ಕಬ್ಬಿಣವನ್ನು ಕರಗಿಸುವ ಕುಲುಮೆಯೋಪಾದಿಯಲ್ಲಿದ್ದ ಐಗುಪ್ತದೇಶದಿಂದ ತಪ್ಪಿಸಿದನು. ಈ ಸಂಕಲ್ಪವು ಈಗ ನೆರವೇರಿತಲ್ಲಾ. ಆದುದರಿಂದ ನನ್ನ ಪ್ರಿಯ ಸಹೋದರ, ಸಹೋದರಿಯೇ ಸೃಷ್ಟಿ ಕರ್ತನನ್ನು ಮರೆತು ನಾವು ದೇವರು ಸೃಷ್ಟಿಸಿದ ಸೃಷ್ಟಿಯನ್ನು ಎಂದಿಗೂ ಆರಾಧಿಸಬಾರದು. ಸೂರ್ಯಚಂದ್ರ, ನಕ್ಷತ್ರ, ಗ್ರಹಗಳು, ಭೂಮಿಯಲ್ಲಿರುವ ಎಲ್ಲಾ ಕಾರ್ಯಗಳು, ಕಾಲಗಳೂ ಕರ್ತನ ನಿಯಂತ್ರಣದಲ್ಲಿವೆ.

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.

ಚೀಯೋನಿನ ಯಾವ ನಿವಾಸಿಯೂ ತಾನು ಅಸ್ವಸ್ಥನು ಎಂದು ಹೇಳನು; ಅಲ್ಲಿಯ ಜನರ ಪಾಪವು ಪರಿಹಾರವಾಗುವದು (ಯೆಶಾ. 33:24).

ಆರೋಗ್ಯ ಸ್ವರ

# ಮೊಡವೆಗೆ ಪರಿಹಾರ

ಒಂದು ಅಗಲವಾದ ಪಾತ್ರಯೊಳಗೆ ನೀರನ್ನು ಹಾಕಿ ಅದಕ್ಕೊಂದಿಷ್ಟು ಬೇವಿನೆಲೆಗಳನ್ನು ಹಾಕಿ ಚೆನ್ನಾಗಿ ಕುದಿಸಿ ಅದರ ಔಷಧಿಯುಕ್ತ ಹಬೆಯನ್ನು ಮುಖಕ್ಕೆ ಹಿಡಿದರೆ ಮೊಡವೆಗಳನ್ನು ನಿವಾರಿಸಕೊಳ್ಳಬಹುದು. ವಾರದಲ್ಲಿ ಕನಿಷ್ಟ ಮೂರು ಬಾರಿಯಾದರೂ ತಲೆಸ್ನಾನ ಮಾಡುವುದರಿಂದ ಮೊಡವೆಗಳ ಸಮಸ್ಯೆಯಿಂದ ದೂರವಿರಬಹುದು. ಮುಖವನ್ನು ಶುದ್ಧವಾದ ನೀರಿನಿಂದ ಆಗಾಗ ತೊಳೆಯುತ್ತಿದ್ದರೆ ಚರ್ಮವು ಶುದ್ಧವಾಗಿ ಜಿಡ್ಡಿನಿಂದ ಮುಕ್ತವಾಗಿ ಮೊಡವೆಗಳಿಂದ ದೂರವಿರಬಹುದು. ಮೊಡವೆಗಳು ಕಂಡುಬಂದರೆ ಮುಖವನ್ನು ಕಡಲೆಹಿಟ್ಟನ್ನು ಅಥವಾ ಒಣ ಬಟಾಣಿ ಲೇಪಿಸಿ ತೊಳೆಯುವುದರಿಂದ ಉತ್ತಮ ಫಲಿತಾಂಶವನ್ನು ಕಂಡುಕೊಳ್ಳಬಹುದು. ಸಾಕಷ್ಟು ಹಸಿತರಕಾರಿ, ಸಲಾಡಗಳು, ಹಣ್ಣಿನ ರಸವನ್ನು ಸೇವಿಸಿದರೆ ಮೊಡವೆಗಳ ಸಮಸ್ಯೆಗಳು ಅಷ್ಟಾಗಿ ಕಾಣಿಸದು. ಶ್ರೀಗಂಧದ ತುಂಡನ್ನು ಗುಲಾಬಿ ನೀರು ಅಥವಾ ಸೌತೆಕಾಯಿ ರಸದೊಂದಿಗೆ ತೇಯ್ದು ಮುಖಕ್ಕೆ ಲೇಪಿಸಬೇಕು. ಕಿತ್ತಳೆ ಹಣ್ಣಿನ ಸಿಪ್ಪೆಯನ್ನು ಮುಖಕ್ಕೆ ಮೃದುವಾಗಿ ಉಜ್ಜುವುದರಿಂದ ಮೊಡವೆಗಳು ಮತ್ತು ಕಪ್ಪು ಕಲೆಗಳನ್ನು ನಿವಾರಿಸಬಹುದು. ತುಳಸಿ ಎಲೆಗಳನ್ನು ಒಣಗಿಸಿ ಕುಟ್ಟಿ ಪುಡಿಮಾಡಿ ಅದಕ್ಕೆ ಸ್ವಲ್ಪ ನೀರನ್ನು ಹಾಕಿ ಪೇಸ್ಟ್‌ನಂತೆ ಮಾಡಿ ಮುಖಕ್ಕೆ ಹಚ್ಚಿದರೆ ಮುಖದ ತೇಜಸ್ಸು ಮತ್ತು ಕಾಂತಿ ವರ್ಧಿಸುತ್ತದೆ. ಕಡಲೆಹಿಟ್ಟು, ಶುದ್ಧವಾದ ಅರಿಶಿನದ ಪುಡಿ, ಹಾಲು ಮತ್ತು ಬೇವಿನ ಎಲೆಯನ್ನು ಜಜ್ಜಿ ಹಿಸುಕಿ ಮಾಡಿದ ಪೇಸ್ಟ್ ಇವುಗಳನ್ನು ಚೆನ್ನಾಗಿ ಬೆರೆಸಿ ಕಣಕಮಾಡಿಕೊಂಡು ಸ್ನಾನ ಮಾಡುವ ಹದಿನೈದು ನಿಮಿಷ ಮೊದಲು ಹಚ್ಚಿ ಸೀಗೆಕಾಯಿಯಿಂದ ತೊಳೆಯುವುದರಿಂದ ಮೊಡವೆಗಳು ನಿವಾರಣೆಯಾಗುತ್ತದೆ. (ಸಂಗ್ರಹ.)

# ಮಕ್ಕಳಲ್ಲಿ ಬೊಜ್ಜು ತಡೆಗೆ ಅಧಿಕ ನಿದ್ದೆಯೇ ಮದ್ದು !

ಸಣ್ಣ ವಯಸ್ಸಿನ ಮಕ್ಕಳನ್ನು ರಾತ್ರಿ ವೇಳೆ ಬೇಗನೆ ಮಲಗಿಸುವುದರಿಂದ ಅವರ ದೇಹತೂಕವು ವಿಪರೀತ ಹೆಚ್ಚಾಗದಂತೆ ತಡೆಗಟ್ಟಲು ಸಾಧ್ಯವಿದೆಯೆಂದು ನೂತನ ಅಧ್ಯಯನವೊಂದು ಬಹಿರಂಗಪಡಿಸಿದೆ. ಎಳೆಯ ವಯಸ್ಸಿನ ಮಕ್ಕಳಲ್ಲಿ ಆಹಾರಸೇವೆಯ ಪ್ರವೃತ್ತಿಗೂ ಹಾಗೂ ಅವರ ನಿದ್ದೆಯ ಅವಧಿಗೂ ಪರಸ್ಪರ ಸಂಬಂಧವಿರುವುದಾಗಿಯೂ ಈ ಬಗ್ಗೆ ಸಂಶೋಧನೆ ನಡೆಸಿರುವ ಅಮೆರಿಕದ ಟಿಂಪ್ಸ್ ವಿಶ್ವವಿದ್ಯಾನಿಲಯದ ಬೊಜ್ಜು ಕುರಿತ ಸಂಶೋಧನಾ ಕೇಂದ್ರ ಹಾಗೂ ಶಿಕ್ಷಣ ಸಂಸ್ಥೆ (ಸಿಒಆರ್‌ಇ) ನ ವಿಜ್ಞಾನಿಗಳು ಪ್ರತಿವಾದಿಸಿದ್ದಾರೆ.

8 ರಿಂದ 11 ವರ್ಷದೊಳಗಿನ ಮಕ್ಕಳು ಈ ಅಧ್ಯಯನದಲ್ಲಿ ಪಾಲ್ಗೊಂಡಿದ್ದು, ಅವರಲ್ಲಿ ಶೇ. 27ರಷ್ಟು ಮಂದಿ ಅಧಿಕ ದೇಹತೂಕದ ಸಮಸ್ಯೆಯಿರುವವರಾಗಿದ್ದರು. ಅಧ್ಯಯನದ ಅವಧಿಯ ಮೊದಲ ವಾರದಲ್ಲಿ ಈ ಮಕ್ಕಳಿಗೆ ಸಾಮಾನ್ಯ ಪ್ರಮಾಣದ ನಿದ್ದೆಯನ್ನು ಮಾಡುವಂತೆ ತಿಳಿಸಲಾಗಿತ್ತು. ಎರಡನೆ ವಾರದಲ್ಲಿ ಈ ಮಕ್ಕಳ ಗುಂಪನ್ನು ಎರಡು ವಿಭಾಗಗಳಾಗಿ ಮಾಡಿ, ಅವರಲ್ಲಿ ಕೆಲವರಿಗೆ ಅಧಿಕ ಸಮಯ ನಿದ್ದೆ ಮಾಡುವಂತೆಯೂ ಇನ್ನು ಕೆಲವರಿಗೆ ಕಡಿಮೆ ನಿದ್ರಿಸುವಂತೆಯೂ ಸೂಚಿಸಲಾಯಿತು. ಆನಂತರ ಮೂರನೆ ಹಾಗೂ ನಾಲ್ಕನೆ ವಾರದಲ್ಲಿ ಈ ಎರಡೂ ತಂಡಗಳು ನಿದ್ದೆಯ ಪ್ರಮಾಣವನ್ನು ಅದಲುಬದಲು ಮಾಡಲಾಯಿತು. ಮಕ್ಕಳು ಜಾಸ್ತಿ ನಿದ್ದೆ ಮಾಡಿದ ಸಮಯದಲ್ಲಿ, ಅವರು ದಿನಕ್ಕೆ ಸರಾಸರಿ 134 ಕ್ಯಾಲರಿ ಆಹಾರ ಸೇವಿಸಿದ್ದರು ಹಾಗೂ ಅವರ ದೇಹತೂಕವು ಅರ್ಧಪೌಂಡ್‌ನಷ್ಟು ಕಡಿಮೆಯಾಗಿತ್ತು ಮತ್ತು ಅವರ ದೇಹದಲ್ಲಿ ಹಸಿವನ್ನು ನಿಯಂತ್ರಿಸುವ ಲೆಪ್ಟಿನ್ ಹಾರ್ಮೋನ್ ಕಡಿಮೆ ಕ್ರಿಯಾ ಶೀಲವಾಗಿರುವುದು ಪತ್ತೆಯಾಗಿರುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ. ಹೀಗಾಗಿ ಹೆಚ್ಚು ಅವಧಿಯ ನಿದ್ದೆ ಮಾಡುವ ಮಕ್ಕಳಲ್ಲಿ ಹಸಿವು ಕಡಿಮೆಯಿರುವುದರಿಂದ ಅವರು ಸೇವಿಸುವ ಆಹಾರದ ಪ್ರಮಾಣವು ಕಡಿಮೆಯಿರುತ್ತದೆ. ಇದರಿಂದ ದೇಹತೂಕ ಹೆಚ್ಚಾಗುವ ಸಾಧ್ಯತೆ ಕಡಿಮೆಯಿರುವುದಾಗಿ ಅವರು ಪ್ರತಿಪಾದಿಸಿದ್ದಾರೆ. (ಸಂಗ್ರಹ.)

ನನ್ನ ಜನರಿಗೆ ಒಡಂಬಡಿಕೆಯ ಆಧಾರವನ್ನಾಗಿಯೂ ಅನ್ಯಜನಗಳಿಗೆ ಬೆಳಕನ್ನಾಗಿಯೂ ನೇಮಿಸಿದ್ದೇನೆ
(ಯೆಶಾ. 42:7).

# ಸಮಾಧಾನ ಮಹೋತ್ಸವ ಉಡುಪಿ – 2014

**ಫೆಬ್ರವರಿ 14, 15 ಮತ್ತು 16, 2014 :: ಕ್ರಿಶ್ಚಿಯನ್ ಹೈಸ್ಕೂಲ್ ಗ್ರೌಂಡ್, ಉಡುಪಿ. :: ಸಂಜೆ 6.00 ಗಂಟೆಗೆ**

ಸಂದೇಶಕರು : ಘನ. ಡಾ॥. ರೋಬರ್ಟ್ ಕನ್ವಿಲ್ಲೆ, ಜೊತೆ ಸುವಾರ್ತಿಕರು
ಬಿಲ್ಲಿ ಗ್ರಾಹಂ, ಇವ್ಯಾಂಜಲಿಸ್ಟಿಕ್ ಅಸೋಸಿಯೇಷನ್

**ಪ್ರಾರ್ಥನಾ ಮನವಿಗಳು**

◆ ಕೂಟಗಳಲ್ಲಿ ಪರಿಶುದ್ಧಾತ್ಮನ ಬಲವಾದ ಪ್ರಸನ್ನತೆಗಾಗಿ ಮತ್ತು ಚಲನೆಗಾಗಿ. ◆ ಜನರ ರಕ್ಷಣೆಗಾಗಿ. ◆ ಸಂದೇಶಕರ ಮೇಲೆ ವಿಶೇಷ ಅಭಿಷೇಕಕ್ಕಾಗಿ. ◆ ಎಲ್ಲಾ ಸಭೆಗಳ ಐಕ್ಯತೆ ಮತ್ತು ಸಹಕಾರಕ್ಕಾಗಿ. ◆ ಕೂಟಗಳಲ್ಲಿ ಅನುಕೂಲಕರವಾದ ವಾತಾವರಣಕ್ಕಾಗಿ. ◆ ಎಲ್ಲಾ ವಿಧವಾದ ಏರ್ಪಾಡುಗಳಿಗಾಗಿ. ◆ ಎಲ್ಲಾ ಆರ್ಥಿಕ ಅಗತ್ಯತೆಗಳು ಒದಗಿಸಲ್ಪಡುವುದಕ್ಕಾಗಿ. ◆ ಸಮಾಧಾನ ಮಹೋತ್ಸವದ ಸಮಿತಿಗಾಗಿ ಮತ್ತು ಎಲ್ಲಾ ಸಿದ್ಧತೆಗಳಿಗಾಗಿ. ◆ ಕೂಟಗಳ ಯಶಸ್ವಿಗಾಗಿ. ◆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಬರುವುದಕ್ಕಾಗಿ. ◆ ಕೂಟಗಳ ಮುಖಾಂತರ ಉಡುಪಿಯಲ್ಲಿ ಉಜ್ಜೀವನ ಉಂಟಾಗುವುದಕ್ಕಾಗಿ.

ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿ.

## ಸಮಾಧಾನ ಮಹೋತ್ಸವ ಉಡುಪಿ – 2014

**ಅಂಚೆ ಪೆಟ್ಟಿಗೆ –22, ಉಡುಪಿ – 576101. ಫೋನ್ : 9880040432, 9880455145, 9741884102.**

---

## ಡಿಜಿಎಮ್ ಬೇತೇಲ್ ಅಂಕಣ

- **ವಿಶ್ವಾಸದ ಮನೆ ಅನಾಥಾಶ್ರಮದಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ ಪ್ರಭಾಕರ್ ಹಾಗೂ ಮಣಿಕಂಠರವರು ಮರಳಿ ಕುಟುಂಬಕ್ಕೆ ಸೇರಿದ್ದಾರೆ.**

### ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವ ಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ನಿನ್ನ ಸಂತಾನದವರಲ್ಲಿ ನನ್ನ ಆತ್ಮವನ್ನು, ನಿನ್ನ ಸಂತತಿಯವರ ಮೇಲೆ ನನ್ನ ಆಶೀರ್ವಾದವನ್ನು, ಸುರಿಸುವೆನು (ಯೆಶಾ. 44:3).

# ಜಾಹಿರಾತು


## ನಿಮಗೆ ದೇವರ ವಾಕ್ಯದ ಟಿ–ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 9844265602.**

## ಬೇಕಾಗಿದ್ದಾರೆ

**24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ ಪ್ರಾರ್ಥನಾ ವೀರರು ಬೇಕಾಗಿದ್ದಾರೆ.**

**ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು.**

**ಪ್ರಾರ್ಥನೆ ಮಾಡಲು ಇಚ್ಚಿಸುವವರು**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941**

## ನೀವು ನಮ್ಮ ಅನಾಥಾಶ್ರಮದಲ್ಲಿ ಸೇವೆ ಮಾಡಲು ಇಷ್ಟಪಡುವುದಾದರೆ

ನಮ್ಮನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781.**


ಇಸ್ರಾಯೇಲೇ, ನಾನು ನಿನ್ನನ್ನ ನಿರ್ಮಿಸಿದೆನು, ನೀನು ನನ್ನ ಸೇವಕನು, ನಿನ್ನನ್ನು ಮರೆತುಬಿಡೆನು (ಯೆಶಾ. 44:21).

ಮಕ್ಕಳ ಸ್ವರ

**ಆದಿಕಾಂಡ ಪುಸ್ತಕದಿಂದ ಆಯ್ದುಕೊಂಡ ಪದಗಳು :**

1) "ನೋಹ" ಎಂಬ ಹೆಸರಿನ ಅರ್ಥವೇನು ?
2) ಮಹಾಶರೀರಿಗಳು ಅಂದರೆ ಯಾರು ?
3) ನೋಹನ ಮಕ್ಕಳ ಹೆಸರೇನು ?
4) ಭೂಮಿಯ ಮೇಲೆ ಜಲಪ್ರಳಯವುಂಟಾದಾಗ ನೋಹನು ಎಷ್ಟು ವರ್ಷದವನಾಗಿದ್ದನು?
5) 'ಯೆಫೆತ್' ಅಂದರೆ ಏನು?
6) "ಮಿಚ್ರಯಿಮ್ ಅಂದರೆ ಏನು ?
7) ನಿಮ್ರೋದನ ತಂದೆ ಯಾರು ?
8) "ಪೆಲೆಗ್" ಅಂದರೆ ಅರ್ಥವೇನು?
9) "ಬಾಬೆಲ್" ಎಂದರೆ ಅರ್ಥವೇನು?
10) ಅಬ್ರಹಾಮನ ತಂದೆ ಯಾರು?

---

**ನವಂಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1. ಆಕಾಶವನ್ನು (ಆದಿ. 1:8).
2. ಆರನೇ ದಿನದಲ್ಲಿ (ಆದಿ. 1:31).
3. ನೆಲ/ಮಣ್ಣು ಅಥವಾ ಮನುಷ್ಯ
4. ಜೀವ (ಆದಿ. 3:20).
5. ಆದಾಮನು ಒಂದೊಂದು ಪ್ರಾಣಿಗೆ ಯಾವ ಯಾವ ಹೆಸರಿಟ್ಟನೋ ಅದೇ ಹೆಸರಾಯಿತು (ಆದಿ. 2:19).
6. ಅಲೆದಾಟ (ಆದಿ. 4:16).
7. ಯೂಬಾಲನು (ಆದಿ. 4:20).
8. ಲೆಮೆಕನು (ಆದಿ. 4:24).
9. ನೇಮಿಸಲ್ಪಟ್ಟವನು (ಆದಿ. 4:26).
10. ಹನೋಕನು (365) (ಆದಿ. 5:23).


**ಮನೆ ಮಾರಾಟಕ್ಕಿದೆ**



**ಶಂಕರಪುರದ ದುರ್ಗನಗರದಲ್ಲಿ 1500 sq.ft.**
**R.C.C ಮನೆ ಸಹಿತ 15 ಸೆಂಟ್ಸ್ ಜಾಗ ಮಾರಾಟಕ್ಕಿದೆ.**
**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :**
**08007853167, 09764630343.**


ಯೆಹೋವನಿಂದ ಶಾಶ್ವತರಕ್ಷಣೆ ದೊರೆಯುವದು; ಯುಗಯುಗಾಂತರಕ್ಕೂ ನೀವು ನಾಚಿಕೆಗೀಡಾಗುವದಿಲ್ಲ, ಮಾನಭಂಗಪಡುವದಿಲ್ಲ (ಯೆಶಾ. 45:17).